ಸಂಪುಟ 01 । ಸಂಚಿಕೆ 156 । ಬುಧವಾರ 29 ಏಪ್ರಿಲ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ, ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ, ಗದಗ, ವಿಜಯನಗರ, ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ಅಂತರರಾಷ್ಟ್ರೀಯ ನೃತ್ಯ ದಿನ**

ಪ್ರತಿ ವರ್ಷ ಏಪ್ರಿಲ್ 29 ರಂದು ಆಚರಿಸಲಾಗುತ್ತದೆ ಮತ್ತು ಇದನ್ನು ವಿಶ್ವ ನೃತ್ಯ ದಿನ ಎಂದೂ ಕರೆಯುತ್ತಾರೆ. ನೃತ್ಯದ ಮಹತ್ವವನ್ನು ಇನ್ನೂ ಗುರುತಿಸದ ಸರ್ಕಾರಗಳು, ರಾಜಕಾರಣಿಗಳು ಮತ್ತು ಸಂಸ್ಥೆಗಳಿಗೆ ಇದು ಎಚ್ಚರಿಕೆಯ ಗಂಟೆಯಾಗಿದೆ.

**2) ಅಂತರರಾಷ್ಟ್ರೀಯ ಶಿಲ್ಪಕಲಾ ದಿನ**

ಪ್ರತಿ ವರ್ಷ, ಏಪ್ರಿಲ್ ತಿಂಗಳ ಕೊನೆಯ ಶನಿವಾರ, ಅಂದರೆ ಈ ವರ್ಷ ಏಪ್ರಿಲ್ 29 ರಂದು, ನಾವು ನಮ್ಮ ಅಂತರರಾಷ್ಟ್ರೀಯ ಶಿಲ್ಪಕಲಾ ದಿನವನ್ನು ಆಚರಿಸುತ್ತೇವೆ. ಇದು ಶಿಲ್ಪಕಲೆ ಮತ್ತು ಕೆತ್ತಲಾದ ಕೃತಿಗಳನ್ನು ಗೌರವಿಸುವ ಆಚರಣೆಯಾಗಿದೆ.

## ಸುಭಾಷಿತ

ಪರರನ್ನು ಹೀನವಾಗಿ ಪರಿಗಣಿಸಬೇಡಿ. ಅದು ನಿಮ್ಮ ಮನಸ್ಸಿನ ಯೋಗ್ಯತೆಯನ್ನು ಕುಗ್ಗಿಸುತ್ತದೆ.

ಇಂಗರ್ ಸಾರ್




# ಮತ್ತೆ ತಾರಕಕ್ಕೇರಿದ ಸಿಎಂ ಕುರ್ಚಿ ಕಚ್ಚಾಟ, ತೀವ್ರಗೊಂಡ ಬಣಗಳ ಬಡಿದಾಟ



ಬೆಂಗಳೂರು: ಸಿಎಂ ಕುರ್ಚಿ ಕದನ ದಿನೇದಿನೇ ತಾರಕಕ್ಕೇರುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ರವರ ಬಣಗಳ ನಡುವಿನ ಬಡಿದಾಟ ತೀವ್ರಗೊಂಡಿದೆ. ಮುಖ್ಯಮಂತ್ರಿ ಗದ್ದುಗೆ ಪಡೆಯಲು ಡಿಸಿಎಂ ಡಿ.ಕೆ.ಶಿವಕುಮಾರ್‌ರವರು ತಮ ಕಸರತ್ತನ್ನು ಮುಂದುವರೆಸಿದ್ದಾರೆ. ಸಿಎಂ ಸ್ಥಾನದಲ್ಲಿ ಮುಂದುವರೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ ಆಪ್ತರ ಮೂಲಕ ತಂತ್ರ ಹೆಣೆಯುತ್ತಿದ್ದಾರೆ.

ತಂತ್ರ–ಪ್ರತಿತಂತ್ರಗಳ ಮೇಲಾಟಗಳು ಜೋರಾಗಿವೆ. ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ನಂತರ ರಾಜ್ಯ ರಾಜ–ಕಾರಣದಲ್ಲಿ ಮಹತ್ವದ ಬದಲಾವಣೆಗಳು ನಡೆಯುವ ಸಾಧ್ಯತೆ ಹೆಚ್ಚಾಗಿದೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆಯಾಗುವುದೇ?, ಅಥ–ವಾ ಸಂಪುಟ ಪುನರ್ ರಚನೆಯಾಗುವುದೇ? ಎಂಬ ಚರ್ಚೆಗಳು ನಡೆಯುತ್ತಿವೆ.ಸಂಪುಟ ಪುನರ್ ರಚನೆಯಾದರೆ ಮುಖ್ಯಮಂತ್ರಿ ಸ್ಥಾನ ಸಿದ್ದರಾಮಯ್ಯನವರಿಗೆ ಅಬಾಧಿತವಾಗಲಿದೆ. ಸಂಪುಟ ಪುನರ್‌ರಚನೆಯಾಗದಿದ್ದರೆ ನಾಯಕತ್ವ ಬದಲಾವಣೆಯಾಗಿ ಹೊಸ ನಾಯಕನ ನೇತೃತ್ವದಲ್ಲಿ ಹೊಸ ಸಂಪುಟ ರಚನೆಯಾಗುವ ಸಾಧ್ಯತೆ ಇದೆ. ಸಿಎಂ, ಡಿಸಿಎಂ ಪ್ರತೀದಿನ ಹೊಸ ದಾಳಗಳನ್ನು ಉರುಳಿಸುತ್ತಿದ್ದಾರೆ. ಈಗಾಗಲೇ ಡಿಕೆಶಿಯವರು ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿಯಾಗಿ ಪಂಚರಾಜ್ಯಗಳ ಚುನಾವಣೆ ಫಲಿತಾಂಶಕ್ಕೂ ಮುನ್ನವೇ ರಾಜ್ಯ ನಾಯಕತ್ವದ ಬಗ್ಗೆ ಚರ್ಚೆ ನಡೆಸುವಂತೆ ಒತ್ತಡ ಹೇರಿದ್ದಾರೆ.

ಮೇ ಮೊದಲ ವಾರ ಅಥವಾ ಎರಡನೇ ವಾರದಲ್ಲಿ ಇದಕ್ಕೆ ಚಾಲನೆ ಸಿಗಬಹುದು ಎಂದು ಡಿಸಿಎಂ ಅವರ ಆಪ್ತ ವಲಯದಿಂದ ತಿಳಿದುಬಂದಿದೆ. ಆದರೆ ಸಿಎಂ ಬಣದವರು ಬೇರೆಯೇ ದಾಳ ಉರುಳಿಸಿದ್ದು, ಅಹಿಂದ ಅಸ್ತ್ರವನ್ನು ಪ್ರಯೋಗಿಸಿದ್ದಾರೆ. ರಾಜ್ಯಾದ್ಯಂತ ಅಹಿಂದ ಸಮಾವೇಶಗಳನ್ನು ನಡೆಸುವ ಮೂಲಕ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವುದರ ಜೊತೆಗೆ ಸಿಎಂ ಸಿದ್ದರಾಮಯ್ಯನವರ ನಾಯಕತ್ವವನ್ನು ಬಲಪಡಿಸಬೇಕು. 2028ರ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಬೇಕು. ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ತಾವೆಲ್ಲಾ ಸಜ್ಜಾಗುವ ಕ್ರಿಯಾಯೋಜನೆಯನ್ನು ರೂಪಿಸಿರುವ ತಂತ್ರವನ್ನು ಹೈಕಮಾಂಡ್ ಗಮನಕ್ಕೆ ತಂದಿದ್ದಾರೆ. ಒಟ್ಟಾರೆ ರಾಜ್ಯದಲ್ಲಿ ಮೇ ತಿಂಗಳಿನಲ್ಲಿ ರಾಜಕೀಯ ಕ್ರಾಂತಿ ನಡೆಯುವ ಸಾಧ್ಯತೆ ನಿರೀಕ್ಷಿಸಲಾಗಿದೆ.

ಸಿಎಂ–ಡಿಸಿಎಂ ಬಣಗಳ ಸದಸ್ಯರು ತಮತಮ ನಿಲುವಿಗೆ ಅಂಟಿಕೊಂಡಿದ್ದು, ಯಾವ ತಿರುವು ಪಡೆದುಕೊಳ್ಳಲಿದೆ ಎಂಬುದನ್ನು ಕಾದು ನೋಡಬೇಕಾಗಿದೆ.ಈ ನಡುವೆ ಯಡಿಯೂರಪ್ಪನವರ ಅಭಿಮಾನೋತ್ಸವ ಮೇ 9 ರಂದು ನಡೆಯಲಿದ್ದು, ಬಿಜೆಪಿ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದೆ. ಇದಕ್ಕೆ ಸಡ್ಡು ಹೊಡೆಯಲು ಕಾಂಗ್ರೆಸ್ ಅಹಿಂದ ಸಮಾವೇಶಗಳನ್ನು ನಡೆಸುವ ಯೋಜನೆ ರೂಪಿಸಿದೆ. ಅಹಿಂದ ಸಮಾವೇಶಕ್ಕೆ ಹೈಕಮಾಂಡ್ ಹಸಿರು ನಿಶಾನೆ ತೋರಿಸಿಲ್ಲ. ಇನ್ನೂ ನಾಯಕತ್ವದ ಬಗ್ಗೆಯೇ ಚರ್ಚೆ ನಡೆಯುತ್ತಿದೆ. ರಾಜ್ಯ ರಾಜಕಾರಣದಲ್ಲಿ ಮೇ ತಿಂಗಳಿನಲ್ಲಿ ಏನಾಗಲಿದೆಯೋ ಕಾದು ನೋಡಬೇಕು.

# SSLC ಮೇಲೆಯೇ Paramedical Course ಆರಂಭಕ್ಕೆ ಅವಕಾಶ

**ನೈಜ್ಯ ದೆಸೆ ನ್ಯೂಸ್**

**NCAHP ಹಾಗೂ Paramedical Board ನ PUC Science ಅರ್ಹತೆ ನಿಯಮಕ್ಕೆ ಹೈಕೋರ್ಟ್ ತಾತ್ಕಾಲಿಕ ತಡೆ SSLC ಮೇಲೆ PARAMRDICAL ಮಾಡಲು ವಿದ್ಯಾರ್ಥಿಗಳಿಗೆ ಮತ್ತೆ ಅವಕಾಶ ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು PUC Science ಕಡ್ಡಾಯ ಅರ್ಹತೆ ವಿಧಿಸಿದ್ದ ರಾಷ್ಟ್ರೀಯ ಸಹಾಯಕ ಆರೋಗ್ಯ ವೃತ್ತಿಗಳ ಆಯೋಗ (NCAHP) ಹಾಗೂ Paramedical Boarಜನ ನಿರ್ಧಾರಕ್ಕೆ ಮಾನ್ಯ ಹೈಕೋರ್ಟ್ ತಾತ್ಕಾಲಿಕ ತಡೆ ನೀಡಿರುವ ಹಿನ್ನೆಲೆಯಲ್ಲಿ, ಇದೀಗ ಮತ್ತೆ SSLC ಉತ್ತೀರ್ಣ ವಿದ್ಯಾರ್ಥಿಗಳಿಗೆ ಪ್ಯಾರಾಮೆಡಿಕಲ್ ಕೋರ್ಸ್‌ಗಳಲ್ಲಿ ಪ್ರವೇಶ ಪಡೆಯುವ ಅವಕಾಶ ಲಭ್ಯವಾಗಿದೆ.**




**ಹಿಂದಿನಂತೆ SSLC ನಂತರವೇ ವಿವಿಧ ಡಿಪ್ಲೋಮಾ ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಲಾಗುತ್ತಿತ್ತು.**

ಆದರೆ ಕೇಂದ್ರ ಸರ್ಕಾರದ NCAHP ನಿಯಮಾವಳಿಗಳ ಪ್ರಕಾರ 2026–27ನೇ ಶೈಕ್ಷಣಿಕ ಸಾಲಿನಿಂದ PUC Science ಅರ್ಹತೆಯನ್ನು ಕಡ್ಡಾಯಗೊಳಿಸಲಾಗಿದ್ದು, ಕೇವಲ ಎರಡು ಕೋರ್ಸ್‌ಗಳಿಗೆ ಮಾತ್ರ ಕೇಂದ್ರ ಮಟ್ಟದಲ್ಲಿ ಅನುಮೋದನೆ ನೀಡಲಾಗಿ–ತ್ತು. ಇದರಿಂದ ಕರ್ನಾಟಕದ ವಿಶೇಷವಾಗಿ ಗ್ರಾಮೀಣ ಹಾಗೂ ಆರ್ಥಿಕವಾಗಿ ಹಿಂದುಳಿದ ಸಾವಿರಾರು ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪ್ರವೇಶದಿಂದ ವಂಚಿತರಾಗಿದ್ದರು. ಪ್ರಸ್ತುತ ಪ್ಯಾರಾಮೆಡಿಕಲ್ ವಿಭಾಗದಲ್ಲಿ DMLT, DHI, DOT & AT, DXT, DMIT, DNRT, DOT, DDT ಸೇರಿದಂತೆ ಒಟ್ಟು 9 ಡಿಪ್ಲೋಮಾ ಕೋರ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಕೋರ್ಸ್ ಪೂರ್ಣಗೊಳಿಸಿದ ನಂತರ ವಿದ್ಯಾರ್ಥಿಗಳಿಗೆ ಮೆಡಿಕಲ್ ಲ್ಯಾಬ್ ಟೆಕ್ನಿಷಿಯನ್, ಎಕ್ಸ್‌ರೇ ಟೆಕ್ನಿಷಿಯನ್, ಡಯಾಲಿಸಿಸ್ ಟೆಕ್ನಿಷಿಯನ್, ಓಪರೇಶನ್ ಥಿಯೇಟರ್ ಟೆಕ್ನಿಷಿಯನ್ ಸೇ–ರಿದಂತೆ ವಿವಿಧ ಆರೋಗ್ಯ ಸೇವಾ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಲಭ್ಯವಾಗುತ್ತವೆ. PUC Science ಕಡ್ಡಾಯ ನಿಯಮ ಜಾರಿಗೆ ಬಂದ ಬಳಿಕ ಪ್ಯಾರಾಮೆಡಿಕಲ್ ಕಾಲೇಜುಗಳ ಪ್ರವೇಶ ಪ್ರಮಾಣದಲ್ಲಿ ಗಣನೀಯ ಕುಸಿತ ಉಂಟಾಗಿತ್ತು. ಈ ಹಿನ್ನೆಲೆ ಶಿಕ್ಷಣ ಸಂಸ್ಥೆಗಳು ಹಾಗೂ ವಿದ್ಯಾರ್ಥಿಗಳ ಪರವಾಗಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಮಧ್ಯಂತರ ತಡೆ ಆದೇಶ ನೀಡಿದ್ದು, ಮತ್ತೆ SSLC ನಂತರವೇ ಕೋರ್ಸ್‌ಗಳನ್ನು ಆರಂಭಿಸಲು ಅವಕಾಶ ಕಲ್ಪಿಸಲಾಗಿದೆ. ಹೈಕೋರ್ಟ್ ಆದೇಶದಿಂದ ವಿದ್ಯಾರ್ಥಿಗಳಿಗೆ ಕಡಿಮೆ ಅವಧಿಯಲ್ಲಿ ಉದ್ಯೋಗಮುಖಿ ಶಿಕ್ಷಣ ಪಡೆಯುವ ದಾರಿ ಮತ್ತೆ ತೆರೆದಿದ್ದು, ಶಿಕ್ಷಣ ಸಂಸ್ಥೆಗಳು, ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಸಂತಸ ವ್ಯಕ್ತವಾಗಿದೆ. ಸರ್ಕಾರವು ಶೀಘ್ರದಲ್ಲೇ ಸ್ಪಷ್ಟ ಮಾರ್ಗಸೂಚಿಗಳನ್ನು ಪ್ರಕಟಿಸಬೇಕೆಂದು ಸಂಬಂಧಿತ ವಲಯಗಳಿಂದ ಆಗ್ರಹ ವ್ಯಕ್ತವಾಗಿದೆ.

# ಕಣ್ಣಿನ ಉಚಿತ ತಪಾಸಣೆ–ಶಸ್ತ್ರ ಚಿಕಿತ್ಸಾ ಶಿಬಿರ ಯಶಸ್ವಿ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ತಾಲೂಕಿನ ಬಂಡೆಪ್ಪನಹಳ್ಳಿ ಗ್ರಾಮದ ಮಹಾ ತಪಸ್ವಿ ಬಂಡೆಪ್ಪಸ್ವಾಮಿ ಜಾತ್ರಾ ಮಹೋತ್ಸವ ನಿಮಿತ್ಯವಾಗಿ ಅನುಗ್ರಹ ಕಣ್ಣಿನ ಆಸ್ಪತ್ರೆ ವಿಜಯಪುರ, ಅನುಗ್ರಹ ವಿಷನ್ ಫೌಂಡೇಶನ್ ಟ್ರಸ್ಟ್ ಮತ್ತು ಜಿಲ್ಲಾ ಅಂ–ಧತ್ವ ನಿವಾರಣೆ ಸಂಸ್ಥೆ ವಿಜಯಪುರ ಹಾಗೂ ಜಾತ್ರಾ ಸಮಿತಿಯ ಸಹಯೋಗದಲ್ಲಿ ಹಮ್ಮಿಕೊಂಡ ಉಚಿತ ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರ ಯಶಸ್ವಿಯಾಯಿತು.**




ಮಂಗಳವಾರ ದೇವಸ್ಥಾನದ ಆವರಣದಲ್ಲಿ ಬೆಳಿಗ್ಗೆ 10 ಘಂಟೆಯಿಂದ ಆರಂಭವಾದ ಈ ಉಚಿತ ಚಿಕಿತ್ಸಾ ಶಿಬಿರದಲ್ಲಿ ಬಂಡೆಪ್ಪನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸುಮಾರು 135ಕ್ಕಿಂತಲೂ ಹೆಚ್ಚು ಜನರು ತಮ್ಮ ಕಣ್ಣಿನ ತಪಾಸಣೆಯನ್ನು ಮಾಡಿಸಿಕೊಂಡರು. ಇದರಲ್ಲಿ 30 ಜನರನ್ನು ಶಸ್ತ್ರ ಚಿಕಿತ್ಸೆಗೆ ಆಯ್ಕೆ ಮಾಡಲಾಯಿತು.

ಪ್ರತಿಯೊಬ್ಬ ಅರ್ಹ ರೋಗಿಯನ್ನು ಅನುಗ್ರಹ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಉಚಿತವಾಗಿ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆಯನ್ನು ಮಾಡಿ ಲೆನ್ಸ್ ಅಳವಡಿಸಲಾಗುವುದೆಂದು ಆಸ್ಪತ್ರೆಯ ಮುಖ್ಯಸ್ಥರು ಪತ್ರಿಕೆಗೆ ತಿಳಿಸಿದ್ದಾರೆ. ಶಿಬಿರದಲ್ಲಿ ಅನುಗ್ರಹ ಕಣ್ಣಿನ ಆಸ್ಪತ್ರೆಯ ವೈದ್ಯ ಡಾ.ಪ್ರವೀಣಕುಮಾರ ಹಿರೇಮಠ ಹಾಗೂ ಅನುಗ್ರಹ ಕಣ್ಣಿನ ಆಸ್ಪತ್ರೆ ಸಿಬ್ಬಂದಿಗಳು ಕಾರ್ಯನಿರ್ವಹಿಸಿದರು. ಈ ಸಮಯದಲ್ಲಿ ಜಾತ್ರಾ ಸಮಿತಿಯ ಪದಾಧಿಕಾರಿಗಳು ಗ್ರಾಮದ ಗಣ್ಯರು ಹಾಗೂ ಹಿರಿಯರು ಉಪಸ್ಥಿತರಿದ್ದರು.

# ಪುರಾಣ ಆಲಿಕೆಯಿಂದ ಸಂಸ್ಕಾರ ಪ್ರಾಪ್ತಿ: ಪ್ರಭುಸಾರಂಗ ಶ್ರೀ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟೆ: ನಮ್ಮ ನಾಡಿನಲ್ಲಿ ಜನರು ಮೊದಲು ಸಂಸ್ಕಾರವಂತರಾಗಬೇಕು, ಸಂಸ್ಕಾರ ಸಿಗುವುದು ಪುರಾಣ ಪ್ರವಚನದಲ್ಲಿ ಪಾಲ್ಗೊಂಡಾಗ ಮಾತ್ರ ಎಲ್ಲರಲ್ಲಿ ಸಂಸ್ಕಾರ ಸಂಸ್ಕೃತಿ ಸಿಗುತ್ತದೆ.**

ಶ್ರೀ ಜಗದ್ಗುರು ಪಕೀರೇಶ್ವರ ಈ ನಾಡಿನ ಎಲ್ಲಾ ಜನರಲ್ಲಿ ಭಾವೈಕ್ಯತೆಯ ಮೂಡಿಸುವದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಈ ಗುರುವಿನ ಶಿಷ್ಯ ಬಂಡೆಪ್ಪ ಸ್ವಾಮಿ ಇವರು ಕೂಡ ಜನರ ಮನಸ್ಸಿನಲ್ಲಿ ಅಜರಾಮರವಾಗಿ ಅವರ ಶಕ್ತಿ ತಪಸ್ಸು ಎಲ್ಲರ ಮನೆ ಮಾತಾಗಿದೆ ಎಂದು ಎಂದು ಸಿಂದಗಿ ಸಾರಂಗಮಠದ .ಪ್ರಭುಸಾರಂಗ ದೇವ ಶಿವಾಚಾರ್ಯ ಸ್ವಾಮೀಜಿ ಹೇಳಿದರು ಅವರು ತಾಲ್ಲೂಕಿನ ತಾಲ್ಲೂಕಿನ ಬಂಡೆಪ್ಪನಳ್ಳಿ ಗ್ರಾಮದಲ್ಲಿ



ಮಹಾತಪಸ್ವಿ ಬಂಡೆಪ್ಪಸ್ವಾಮಿ ಜಾತ್ರಾ ಮಹೋತ್ಸವದಂಗವಾಗಿ ಶಿರಹಟ್ಟಿ ಜಗದ್ಗುರು ಪಕೀರೇಶ್ವರ ಮಹಾಪುರಾಣದ ಏಳನೆ ದಿನದ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಪುರಾಣ ಪ್ರಚನಕಾರರಾದ ಪೂಜ್ಯ ಶ್ರೀ ಮಹಾಂತ ದೇವರು ವಿಭೂತಿಮಠ ತಾಳಿಕೋಟಿ ಹಾಗೂ ಕುಮಾರಸ್ವಾಮಿ ಜಾಹಗಿರದಾರ ವಿಶ್ವನಾಥ ಜಾಹಗಿರದಾರ ಸಂಗೀತ ಸೇವೆ ಬಸವರಾಜ ಬಂಟನೂರ ಈಶ್ವರ ಬಡಿಗೇರ ಉಪಸ್ಥಿತರಿದ್ದರು ಹಾಗೂ ಬಂಡೆಪ್ಪ ಸ್ವಾಮಿ ಮಠದ ಎಲ್ಲಾ ಬಂಡೆಪ್ಪನಳ್ಳಿ ಸಾಲವಾಡಗಿ ಸಮಸ್ತ ಸದ್ಭಕ್ತರು ಪಾಲ್ಗೊಂಡಿದ್ದರು ಇದೇ ಸಂದರ್ಭದಲ್ಲಿ ಸೇನೆಯಲ್ಲಿ ಸೇವೆ ಸಲ್ಲಿಸಿದ ಶ್ರೀ ಜಗದಿಶ ನಾಗಯ್ಯ ಸಾಲಿಮಠ ಇವರಿಗೆ ಸನ್ಮಾನಿಸಲಾಯಿತು.

# ಮೇ.1 ರಂದು ಜಾನಪದ ಜಾತ್ರೆ ಬದುಕು ಕಾತ್ರಿ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭ: ಬಸವರಾಜ ವೀರಗಾಸೆ

**ನೈಜ್ಯ ದೆಸೆ ನ್ಯೂಸ್**

**ಶ್ರೀ ಗವಿಸಿದ್ದೇಶ್ವರ ಸಾಂಸ್ಕೃತಿಕ ಜಾನಪದ ಕಲಾ ಸಂಘ ಸಿಂಧನೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಯಚೂರು ಇವರ ಸಹಯೋಗದಲ್ಲಿ ಮೇ 1 ರಂದು ನಗರದ ಇಂದಿರಾ ನಗರದ ಶ್ರೀ ರಾಮಲಿಂಗ ಬನಶಂಕರಿ ದೇವಸ್ಥಾನದಲ್ಲಿ ಸಂಜೆ 4 ಗಂಟೆಗೆ ಜಾನಪದ ಜಾತ್ರೆ ಬದುಕು ಕಾತ್ರಿ ಹಾಗೂ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಲಿದೆ ಎಂದು ಕಾರ್ಯದರ್ಶಿ ಬಸವರಾಜ ವೀರಗಾಸೆ ಹೇಳಿದರು.**




ನಗರದ ಪತ್ರಿಕಾ ಭವನದಲ್ಲಿ ಏ.28 ಮಂಗಳವಾರ ಸುದ್ದಿಗೋಷ್ಟಿ ನಡೆಸಿ ಮಾತನಾಡಿದ ಅವರು, ದಿವ್ಯ ಸಾನಿಧ್ಯವನ್ನು ಕೊಪ್ಪಳದ ಗವಿಶ್ರೀಗಳು, ಅಧ್ಯಕ್ಷತೆ ಶಾಸಕ ಹಂಪನಗೌಡ ಬಾದರ್ಲಿ, ವಹಿಸುವರು. ಮಸ್ಕಿ ಶಾಸಕ ಬಸನಗೌಡ ತುರ್ವಿಹಾಳ, ಕಾರ್ಯಕ್ರಮವನ್ನು ಉದ್ಘಾಟಿಸುವರು, ಎಂಎಲ್ಸಿ ಬಸನಗೌಡ ಬಾದರ್ಲಿ ಜ್ಯೋತಿ ಬೆಳಗಿಸುವರು, ಮಾಜಿ ಸಚಿವ ವೆಂಕಟ–ರಾವ್ ನಾಡಗೌಡ, ಮಾಜಿ ಸಂಸದ ಕೆ.ವಿರುಪಾಕ್ಷಪ್ಪ, ಸುಡಾ ಅಧ್ಯಕ್ಷ ಬಾಬುಗೌಡ ಬಾದರ್ಲಿ, ಬಿಜೆಪಿ ಮುಖಂಡ ಕೆ.ಕರಿಯಪ್ಪ, ನಿರ್ದೇಶಕ ಬಸವರಾಜ ಹೂಗಾರ, ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ನೇತ್ರ ತಜ್ಞ ಡಾ.ಚನ್ನನಗೌಡ, ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿರಲಿದ್ದಾರೆ ಎಂದರು.

ಬೀರಪ್ಪ ಶಂಭೋಜಿ ಮಾತನಾಡಿ, ಗ್ರಾಮೀಣ ಪ್ರದೇಶದ ಈ ಕಲೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ಕಾರ, ಸಮುದಾಯ, ಶಾಸಕರು, ಜನ ಪ್ರತಿನಿಧಿಗಳು ಕಲಾವಿದ–ರಿಗೆ ಪ್ರೋತ್ಸಾಹಿಸಿ ಒಂದು ಸ್ವಂತ ಕಟ್ಟಡವನ್ನು ನಿರ್ಮಿಸಿಕೊಡಬೇಕು ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕಲಾ ತಂಡಗಳನ್ನು ಪೋಷಣೆ ಮಾಡಬೇಕು. ಈಗಾಗಲೇ ಶಾಸಕರು ಇಂತಹ ಜಾನಪದ ಕಲೆಗಳನ್ನು ಉಳಿಸಲಿಕ್ಕೆ ಒಂದು ಯೋಜನೆ ರೂಪಿಸಿಕೊಡಿ ಸರ್ಕಾರದಿಂದ ಹಣ ಮಂಜೂರು ಮಾಡಿಸಿಕೊಡುವ ಭರವಸೆ ನೀಡಿದ್ದಾರೆ ಎಂದರು.

ಅಧ್ಯಕ್ಷ ಹನುಮೇಶ ಬಾಗೋಡಿ ಮಾತನಾಡಿ, ಜಾನಪದ ಕಲೆಗಳು ನಶಿಸಬಾರದು ಉಳಿಯಬೇಕೆಂಬುದಾಗಿದೆ ಈ ಸದುದ್ದೇಶದಿಂದ ಪ್ರತಿ ವರ್ಷವೂ ಕೂಡ ಜಾನಪದ ಕಲೆಯ ಬಗ್ಗೆ ಕಾರ್ಯಕ್ರಮ ಮಾಡುತ್ತಾ ಬರುತ್ತಿದ್ದೇವೆ, ಈ ಕಾರ್ಯಕ್ರಮದಲ್ಲಿ ತತ್ವಪದ, ವಚನ, ಭಜನೆ, ಭಕ್ತಿಗೀತೆ, ಜನಪದ, ಲಾವಣಿಹಾಡು, ರಂಗಗೀತೆ, ಭಾವಗೀತೆ, ವೀರಗಾಸೆ, ದಾಸರ ಪದ ಸೇರಿದಂತೆ ಅನೇಕ ಕಲಾ ತಂಡಗಳು ಭಾಗವಹಿಸಲಿವೆ ಎಂದರು. ಈ ಸಂದರ್ಭದಲ್ಲಿ: ಶರಣಪ್ಪ ಭಂಗಿ, ನಾಗರಾಜ, ಅಯ್ಯಪ್ಪ ಕುನ್ನಟಗಿ, ಶಿವು ಹಿರೇಮಠ, ಸೇರಿದಂತೆ ಅನೇಕರಿದ್ದರು.

## ಸಾಹಿತ್ಯ ಸಿಂಚನ

ನೃತ್ಯ

ನಾದ ಬಿದ್ದಾಗ ಹೆಜ್ಜೆ ಮೂಡುತ್ತದೆ,
ತಾಳ ಕೇಳಿದರೆ ಮನವು ಕುಣಿಯುತ್ತದೆ?
ಮೌನವಾದ ಮಾತುಗಳನ್ನೂ
ನೃತ್ಯವೇ ಹೇಳಿಬಿಡುತ್ತದೆ?

ಕೈಗಳ ಮುದ್ರೆ ಕಥೆ ಹೇಳುತ್ತದೆ,
ಕಣ್ಣುಗಳ ಭಾವನೆ ಮನ ಸೆಳೆಯುತ್ತದೆ,
ಹೆಜ್ಜೆಯ ಸದ್ದು ಭೂಮಿಯ ಮೇಲೆ
ಕಲೆಯ ಹಬ್ಬವನ್ನೇ ರಚಿಸುತ್ತದೆ?

ನೃತ್ಯವೆಂದರೆ ದೇಹದ ಚಲನೆ ಅಲ್ಲ,
ಆತ್ಮದ ಆನಂದದ ಸ್ಪಂದನೆ,
ಸಂಗೀತದ ಜೊತೆ ಬೆರೆತಾಗ
ಜೀವನವೇ ರಂಗಮಂಚವಾಗುತ್ತದೆ?

ಭಾವ, ರಾಗ, ತಾಳ ಸೇರಿದಾಗ
ಕಲೆಯ ದೇವಿ ನಗುತ್ತದೆ,
ನರ್ತಕಿಯ ಹೆಜ್ಜೆಯಲ್ಲಿ
ಸಂಸ್ಕೃತಿಯ ಸೌಂದರ್ಯ ಹೊಳೆಯುತ್ತದೆ?

ಅಮರೇಶ್

## ಜೀವಾವಧಿ ಶಿಕ್ಷೆ ರದ್ದು ಕೋರಿದ ವಿನಯ್ ಕುಲಕರ್ಣಿ : ಸಿಬಿಐಗೆ ನೋಟಿಸ್ ಜಾರಿ ಮಾಡಿದ ಕರ್ನಾಟಕ ಹೈಕೋರ್ಟ್!

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ತಮಗೆ ವಿಧಿಸಿರುವ ಜೀವಾವಧಿ ಶಿಕ್ಷೆ ರದ್ದು ಕೋರಿದ ಕಾಂಗ್ರೆಸ್ ಮುಖಂಡ ವಿನಯ್ ಕುಲಕರ್ಣಿ ಹೈಕೋರ್ಟ್‌ಗೆ ಮನವಿ ಸಲ್ಲಿಸಿದ್ದಾರೆ. ಈ ಸಂಬಂಧ ಕೋರ್ಟ್ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ನೋಟಿಸ್ ಜಾರಿ ಮಾಡಿದೆ. ಜತೆಗೆ ರಜಾಕಾಲೀನ ಪೀಠದ ಮುಂದೆ ಅರ್ಜಿ ವಿಚಾರಣೆ ಕೋರಲು ಅನುಮತಿ ನೀಡಿದೆ.**




ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಜೀವಾವಧಿ ಶಿಕ್ಷೆ ರದ್ದು ಮಾಡುವಂತೆ ಕೋರಿ ವಿನಯ್ ಕುಲಕರ್ಣಿ ಮತ್ತು ಚಂದ್ರಶೇಖರ್ ಇಂಡಿ ಅಲಿಯಾಸ್ ಚಂದು ಮಾಮ ಸಲ್ಲಿಸಿರುವ ಮೇಲ್ಮನವಿಗಳನ್ನು ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್ ಮತ್ತು ಟಿ ವೆಂಕಟೇಶ್ ನಾಯಕ್ ಅವರ ವಿಭಾಗೀಯ ಪೀಠವು ವಿಚಾರಣೆ ನಡೆಸಿತು. ವಿನಯ್ ಕುಲಕರ್ಣಿ ಪರವಾಗಿ ಹಿರಿಯ ವಕೀಲ ಸಿ ವಿ ನಾಗೇಶ್ ಮತ್ತು ಚಂದ್ರಶೇಖರ್ ಇಂಡಿ ಪರವಾಗಿ ಎಸ್ ನಾಗಮುತ್ತು ಹಾಜರಾಗಿ ವಾದ ಮಂಡಿಸಿದರು. ವಕೀಲರ ವಾದವೇನು: ಹಿರಿಯ ವಕೀಲ ಸಿವಿ ನಾಗೇಶ್ ಅವರು, "ಯಾವುದೇ ಪ್ರಬಲ ಸಾಕ್ಷ್ಯಾಧಾರಗಳಿಲ್ಲದಿದ್ದರೂ ವಿನಯ್ ಕುಲಕರ್ಣಿಯವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ವಿಚಾರಣಾ ಹಂತದಲ್ಲಿ ಆರೋಪಿಗಳು ಜಾಮೀನಿನಲ್ಲಿದ್ದರು. ಈ ಹಿಂದೆ ಸುಪ್ರೀಂ ಕೋರ್ಟ್ ಕೂಡ ಮೆರಿಟ್ ಆಧಾರದ ಮೇಲೆ ಅವರಿಗೆ ಜಾಮೀನು ಮಂಜೂರು ಮಾಡಿತ್ತು. ಪ್ರಕರಣದ 7 ಪ್ರತ್ಯಕ್ಷದರ್ಶಿಗಳು ಸೇರಿ ಪ್ರಾಸಿಕ್ಯೂಷನ್‌ನ ಬಹುತೇಕ ಸಾಕ್ಷಿಗಳು ಪ್ರತಿಕೂಲವಾಗಿದ್ದಾರೆ (ಹೇಳಿಕೆ ಬದಲಿಸಿದ್ದಾರೆ). ಹೀಗಾಗಿ, ಈ ಅಂಶಗಳನ್ನು ಪರಿಗಣಿಸಿ ಶಿಕ್ಷೆ ಅಮಾನತು ಮಾಡಬೇಕು" ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಮತ್ತೊಬ್ಬ ಹಿರಿಯ ವಕೀಲ ಎಂ. ನಾಗಮುತ್ತು,"ಕೇವಲ ಪಿತೂರಿ ಆರೋಪದ ಮೇಲೆ ಜೀವಾವಧಿ ಶಿಕ್ಷೆ ನೀಡಲಾಗಿದೆ. ಈ ಆರೋಪಿಯ ವಿರುದ್ಧ ಯಾವುದೇ ಸಾಕ್ಷಿಗಳಿಲ್ಲ ಹಾಗೂ ಅಪ್ರೂವರ್ ಆಗಿದ್ದ ವ್ಯಕ್ತಿಯೇ ಪ್ರತಿಕೂಲ ಸಾಕ್ಷಿಯಾಗಿದ್ದಾರೆ" ಎಂದು ನ್ಯಾಯಾಲಯದ ಗಮನ ಸೆಳೆದರು. ಸಿಬಿಐ ಆಕ್ಷೇಪ ವಿಚಾರಣೆ ಮುಂದೂಡಿಕೆ: ವಾದ ಆಲಿಸಿದ ನ್ಯಾಯಪೀಠವು, ಸದ್ಯಕ್ಕೆ ಮೆರಿಟ್ ಆಧಾರದ ಮೇಲೆ ವಿಚಾರಣೆ ನಡೆಸುವುದಿಲ್ಲ ಎಂದು ಸ್ಪಷ್ಟಪಡಿಸಿ ಸಿಬಿಐಗೆ ನೋಟಿಸ್ ಜಾರಿ ಮಾಡಿತು. ಇದೇ ವೇಳೆ, ರಜಾಕಾಲದ ಪೀಠದ ಮುಂದೆ ಈ ಅರ್ಜಿಯ ವಿಚಾರಣೆಗೆ ಅವಕಾಶ ನೀಡಬೇಕು ಎಂಬ ಸಿ.ವಿ. ನಾಗೇಶ್ ಅವರ ಕೋರಿಕೆಯನ್ನು ನ್ಯಾಯಾಲಯ ಪುರಸ್ಕರಿಸಿತು. ಇದಕ್ಕೆ ಸಿಬಿಐ ಪರ ವಕೀಲ ರಾಹುಲ್ ಕೃಷ್ಣಾರೆಡ್ಡಿ ಆಕ್ಷೇಪ ವ್ಯಕ್ತಪಡಿಸಿ, "ವಿಚಾರಣಾಧೀನ ನ್ಯಾಯಾಲಯ ನೀಡಿರುವ ತೀರ್ಪು ಬರೋಬ್ಬರಿ 680 ಪುಟಗಳಷ್ಟಿದೆ. ಇದನ್ನು ಅಧ್ಯಯನ ಮಾಡಿ ಆಕ್ಷೇಪಣೆ ಸಲ್ಲಿಸಲು ನಮಗೆ ಹೆಚ್ಚಿನ ಕಾಲಾವಕಾಶದ ಅಗತ್ಯವಿದೆ" ಎಂದರು. ಸಿಬಿಐ ವಕೀಲರ ಈ ಮನವಿಯನ್ನು ದಾಖಲಿಸಿಕೊಂಡ ನ್ಯಾಯಾಲಯವು ವಿಚಾರಣೆಯನ್ನು ಮುಂದೂಡಿತು.

## ಸಂಸ್ಕಾರ ಶಿಬಿರ ಸಮಾರೋಪ: ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರ ವಿತರಣೆ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್ (ರಿ) ವತಿಯಿಂದ ನೀಲಕಂಠೇಶ್ವರ ಕಲ್ಯಾಣ ಮಂಟಪದಲ್ಲಿ ಯೋಗ ಗುರು ಅನ್ನದಾನಯ್ಯ ನೇತೃತ್ವದಲ್ಲಿ ನಡೆದ ಒಂದು ತಿಂಗಳ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭದಲ್ಲಿ ರಾಜ್ಯಮಟ್ಟದಲ್ಲಿ 10ನೇ ತರಗತಿಯಲ್ಲಿ ಪ್ರಥಮ ಸ್ಥಾನ ಪಡೆದ BVR ಶಾಲೆಯ ಸುಖದೇವನಿಗೆ ಗೌರವ ಸನ್ಮಾನ ನೀಡಲಾಯಿತು. ಕಾರ್ಯಕ್ರಮದಲ್ಲಿ ಪ್ರಸ್ತಾವಿಕವಾಗಿ ಮಾತನಾಡಿದ ಅನ್ನದಾನಯ್ಯ, ಸುಖದೇವನ ಸಾಧನೆಗೆ ಹೆಮ್ಮೆ ವ್ಯಕ್ತಪಡಿಸಿ ಅಭಿನಂದಿಸಿದರು.

ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಹಾಗೂ ಅವರ ತಂದೆ-ತಾಯಿಗಳು ನೀಡಿದ ಸಹಕಾರವನ್ನು ಶ್ಲಾಘಿಸಿದರು. ಯೋಗಾಸನ, ಭಗವದ್ಗೀತೆ, ಭಜನೆ,



ಕಥೆ ಮತ್ತು ಆಟಗಳ ಮೂಲಕ ಮಕ್ಕಳಲ್ಲಿ ನೈತಿಕ ಮೌಲ್ಯಗಳು ಬೆಳೆಸಿ ಆರೋಗ್ಯಕರ ಜೀವನಕ್ಕೆ ದಾರಿ ಮಾಡಿಕೊಡುತ್ತದೆ ಎಂದು ಹೇಳಿದರು. ನಂತರ ಮಾತನಾಡಿದ ಸುಖದೇವ, ನಿರಂತರ ಅಭ್ಯಾಸ ಮತ್ತು ಉತ್ತಮ ಸ್ನೇಹಿತರ ಸಹವಾಸ ಯಶಸ್ಸಿನ ಗುಟ್ಟು ಎಂದು ಹೇಳಿ, ದಿನದ ಪಾಠವನ್ನು ಅದೇ ದಿನ ಓದಿ ಮುಗಿಸಬೇಕು ಎಂದು ಸಲಹೆ ನೀಡಿದರು.

ಸುಖದೇವನ ತಂದೆ ಪರುಶುರಾಮ್ ಕಟ್ಟಿಮನಿ, ಮಕ್ಕಳಲ್ಲಿ ಮೊಬೈಲ್ ಬಳಕೆಯನ್ನು ಕಡಿಮೆ ಮಾಡಿ ಯೋಗಾಭ್ಯಾಸವನ್ನು ದಿನನಿತ್ಯ ಮಾಡಬೇಕು ಎಂದು ಹೇಳಿದರು. ಉರ್ದು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಅಶೋಕ ಕುಮಾರ್ ಚಿಂಚೋಳಿ, ಇತಿಹಾಸದಲ್ಲಿ ಸುಖದೇವನ ಸಾಧನೆ ಹೆಮ್ಮೆಯ ವಿಷಯವಾಗಿದ್ದು, ಆರೋಗ್ಯ ಮತ್ತು ಬುದ್ಧಿಶಕ್ತಿಗೆ ಯೋಗ ಅಗತ್ಯವೆಂದು ಹೇಳಿದರು. ಸರಕಾರಿ ಬಾಲಕಿಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಸಂಜೀವ್ ಸುಧಾಕರ್, ಸಂಸ್ಕಾರ ಶಿಬಿರಗಳು ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುತ್ತವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಂಸ್ಕಾರ ಶಿಬಿರದಲ್ಲಿ ಭಾಗವಹಿಸಿ ನಿರಂತರ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ಅಭಿನಂದನಾ ಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಹೆಚ್.ಟಿ. ಪ್ರಕಾಶ್ ಬಾಬು, ಅರುಣ್ ಕುಮಾರ್, ಮಲ್ಲೇಶನಾಯಕ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಕೊನೆಯಲ್ಲಿ ಶಿಕ್ಷಕ ಸಿಡಿ. ವಿಜಯಕುಮಾರ್ ವಂದನಾರ್ಪಣೆ ಸಲ್ಲಿಸಿದರು. ಮಕ್ಕಳೆಲ್ಲರೂ ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಿದರು.

## ಹೆಚ್. ಪಿ.ವಿ. ಲಸಿಕೆಯನ್ನು ಹಾಕಿಸಿಕೊಳ್ಳಿ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಿ :ರತ್ನಮ್ಮ ಮಾಜಿ ಗ್ರಾಮ ಪಂಚಾಯತ ಸದಸ್ಯರು



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಸಮೀಪದ ಬಾಲಯ್ಯ ಕ್ಯಾಂಪ್ ನಲ್ಲಿ ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಹೆಚ್ .ಟಿ.ವಿ ಲಸಿಕೆಯನ್ನು ಹಾಕಿಸಿಕೊಳ್ಳಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದ ಕುರಿತು ಮಾತನಾಡಿದ ರತ್ನಮ್ಮ. ಮಾಜಿ ಗ್ರಾಮ ಪಂಚಾಯತ ಸದಸ್ಯರಾದ ಅವರು ಆರೋಗ್ಯ ಇಲಾಖೆಯಿಂದ ನೀಡಲಾಗುವ ಹೆಚ್.ಪಿ.ವಿ ಲಸಿಕೆಯನ್ನು ತಮ್ಮ ಹದಿನಾಲ್ಕು ವರ್ಷ ಪೂರ್ಣಗೊಂಡ 15 ವರ್ಷದ ಒಳಗಿನ ಇರುವ ತಮ್ಮ ಹೆಣ್ಣು ಮಕ್ಕಳಿಗೆ ತಪ್ಪದೇ ಹೆಚ್. ಪಿ.ವಿ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಿಕೊಳ್ಳಿ ಎಂದರು.

ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಹೆಚ್ ಪಿ ವಿ ಲಸಿಕೆವು ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಅತ್ಯಂತ ಪರಿಣಾಮಕಾರಿ ಲೈಂಗಿಕ ಚಟುವಟಿಕೆ ಆರಂಭವಾಗುವ ಮುನ್ನ ಈ ಲಸಿಕೆಯನ್ನು ಹಾಕಿಸಿಕೊಳ್ಳುವುದು ಉತ್ತಮ ಮತ್ತು ಪರಿಣಾಮಕಾರಿ. ಹೆಚ್ ಪಿ ವಿ ಲಸಿಕೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ನೀಡಲಾಗುತ್ತದೆ ತಮ್ಮ ಹತ್ತಿರದ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ ಪಿ ವಿ ಲಸಿಕೆಯನ್ನು ಪಡೆದು ಕೊಳ್ಳಿ ಗರ್ಭಕಂಠದ ಕ್ಯಾನ್ಸರ್ ಖಾಯಿಲೆಯಿಂದ ದೂರ ಇರಿ.

ಹೆಚ್ ಪಿ ವಿ ಲಸಿಕೆಯನ್ನು ಪಡೆಯುವುದರಿಂದ ಯಾವುದೇ ರೀತಿಯ ಅಡ್ಡಪರಿಣಾಮಗಳು ಇರುವುದಿಲ್ಲ ತಪ್ಪದೇ ಹೆಚ್ ಪಿ ವಿ ಲಸಿಕೆಯನ್ನು ಪಡೆಯಿರಿ ಎಂದು ತಾಯಿಂದಿರಿಗೆ ಆರೋಗ್ಯ ಸಲಹೆಗಳನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳಾದ ನಿಂಗಮ್ಮ ಮತ್ತು ಆಶಾ ಕಾರ್ಯಕರ್ತೆ ಈರಮ್ಮ ಹದಿಹರೆಯದ ಹೆಣ್ಣು ಮಕ್ಕಳು ಮತ್ತು ತಾಯಿಂದಿರು ಉಪಸ್ಥಿತರಿದ್ದರು.

## ಐಟಿಐ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚುರು ನಗರದ ಸರ್ಕಾರಿ ಐಟಿಐ ಕಾಲೇಜಿನಲ್ಲಿ ವಿವಿಧ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು 10ನೇ ತತ್ಸಮಾನ ಅಥವಾ 8ನೇ ತರಗತಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಜಿಯನ್ನು ಮೇ.08ರೊಳಗಾಗಿ ಸಲ್ಲಿಸಬಹುದಾಗಿದೆ.**


ಅರ್ಜಿಯನ್ನು ಹತ್ತಿರದ ಯಾವುದೇ ಸರ್ಕಾರಿ/ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆ ಅಥವಾ ವೆಬ್ ಸೈಟ್ ವಿಳಾಸ: ಫಫಫ. ಅಖಖಇ.ಏಂಖಂಖಂಏ.ಉಔಗಿ.ಖಓ ನಲ್ಲಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ




ಅಭ್ಯರ್ಥಿಯು ಕಡ್ಡಾಯವಾಗಿ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ವಿಳಾಸವನ್ನು ಹೊಂದಿರಬೇಕು. ಪ್ರವೇಶಾತಿ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯೋಪಾಧ್ಯಯರಿಂದ ಸಹಿ ಪಡೆದಿರುವ 10ನೇ ತತ್ಸಮಾನ ಅಥವಾ 8ನೇ ತರಗತಿಯಲ್ಲಿ ಉತ್ತೀರ್ಣ ಅಂಕಪಟ್ಟಿ, ಇತ್ತೀಚಿನ 2 ಭಾವಚಿತ್ರ, ಜಾತಿ ಆದಾಯ ಪ್ರಮಾಣ ಪತ್ರದ ಪ್ರತಿಗಳನ್ನು ಕಡ್ಡಾಯವಾಗಿ ಸಲ್ಲಿಸಲೆಬೇಕು.

371 ಜೆ ಪ್ರಮಾಣ ಪತ್ರ, ಗ್ರಾಮೀಣ ಮತ್ತು ವ್ಯಾಸಂಗ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. ಮಹಿಳಾ ಅಭ್ಯರ್ಥಿಗಳಿಗೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ವಾರ್ಷಿಕ ಬೋಧನಾ ಶುಲ್ಕ ರೂ1200/- ಅನ್ನು ವಿನಾಯಿತಿ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಸಂಪರ್ಕಿಸಬಹುದಾಗಿದೆ ಎಂದು ರಾಯಚೂರಿನ ಸರ್ಕಾರಿ ಐಟಿಐ ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವೇದ ಜ್ಯೋತಿಷ್ಯ ಸಂಸ್ಕಾರ ಶಿಬಿರದ 25ನೇ ದಿನ ವಿದ್ಯಾರ್ಥಿಗಳಿಗೆ ಮನಮೋಹಕ ಸಂಗೀತ ಕಾರ್ಯಕ್ರಮ



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಶ್ರೀ ಸಿದ್ಧಾಶ್ರಮದಲ್ಲಿ ನಡೆಯುತ್ತಿರುವ ವೇದ ಜ್ಯೋತಿಷ್ಯ ಸಂಸ್ಕಾರ ಶಿಬಿರದ 25ನೇ ದಿನದ ಅಂಗವಾಗಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದ್ದು, ಸಿಂಧನೂರಿನ ಯುವ ಹಿಂದುಸ್ತಾನಿ ಗಾಯಕ ಹಾಗೂ ಶಾಸ್ತ್ರೀಯ ಸಂಗೀತಗಾರರಾದ ವಿಜಯ್ ಹಿರೇಮಠ್ ಅವರು ತಮ್ಮ ಕಲಾತಂಡದೊಂದಿಗೆ ಭಾಗವಹಿಸಿ ವಿದ್ಯಾರ್ಥಿಗಳಿಗೆ ಮನಮೋಹಕ ಸಂಗೀತ ರಸದೌತಣ ಉಣಬಡಿಸಿದರು.**

ಕಾರ್ಯಕ್ರಮದಲ್ಲಿ ವಿವಿಧ ಹಿಂದುಸ್ತಾನಿ ಶಾಸ್ತ್ರೀಯ ರಾಗಗಳು, ಭಕ್ತಿಗೀತೆಗಳು ಹಾಗೂ ಸಂಸ್ಕಾರಪೂರ್ಣ ಸಂಗೀತ ಕೃತಿಗಳನ್ನು ಆಲಪಿಸಿದ ಅವರು, ಸಂಗೀತವು ಮನಸ್ಸನ್ನು ಶುದ್ಧಗೊಳಿಸುವ ಸಾಧನೆಯ ಮಾರ್ಗವಾಗಿದ್ದು, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಕಲಾ-ಸಂಸ್ಕೃತಿಯತ್ತ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಸಂದೇಶ ನೀಡಿದರು. ಶಿಬಿರದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಸಂಗೀತ ಕಾರ್ಯಕ್ರಮವನ್ನು ಆಸಕ್ತಿಯಿಂದ ಆಲಿಸಿ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು. ಸಂಗೀತದ ಮಧುರ ನಿನಾದಗಳಿಂದ ಆಶ್ರಮದ ವಾತಾವರಣ ಆಧ್ಯಾತ್ಮಿಕತೆಯಿಂದ ಕಂಗೊಳಿಸಿತು.

ಶಿಬಿರದ ಆಯೋಜಕರು ಮಾತನಾಡಿ, ವೇದ, ಜ್ಯೋತಿಷ್ಯ, ಸಂಸ್ಕಾರ ಶಿಕ್ಷಣದ ಜೊತೆಗೆ ಕಲೆ ಮತ್ತು ಸಂಸ್ಕೃತಿಯ ಅರಿವು ಮೂಡಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು. ಈ ಸಂಗೀತ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಆಧ್ಯಾತ್ಮಿಕ ಅನುಭವದ ಜೊತೆಗೆ ಭಾರತೀಯ ಶಾಸ್ತ್ರೀಯ ಸಂಗೀತದ ಮಹತ್ವವನ್ನು ಪರಿಚಯಿಸುವ ಮಹತ್ವದ ಕ್ಷಣವಾಗಿ ಪರಿಣಮಿಸಿತು.

# ವಿಶ್ವ ಮಲೇರಿಯಾ ದಿನದ ಜಾಥಾ ಕುಟುಂಬದ ಸದಸ್ಯರಿಗೆ ಜ್ವರ ಕಂಡುಬಂದಲ್ಲಿ ತಡಮಾಡದೆ ರಕ್ತಲೇಪನ ಪರೀಕ್ಷೆ ಮಾಡಿಸಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸೊಳ್ಳೆಯಿಂದ ಹರಡುವ ಕಾಯಿಲೆಗಳಲ್ಲಿ ಮಲೇರಿಯಾವು ಗಂಭೀರವಾಗಿದ್ದು, ಈ ದಿಶೆಯಲ್ಲಿ ಕುಟುಂಬದ ಸದಸ್ಯರಲ್ಲಿ ಯಾ-ರಿಗಾದರೂ ಜ್ವರ ಕಂಡುಬಂದಲ್ಲಿ ನಿರ್ಲಕ್ಷ್ಯ ಮಾಡದೆ, ರಕ್ತಲೇಪನ ಪರೀಕ್ಷೆ ಮಾಡಿಸಬೇಕು. ಇದರಿಂದ ಮಲೇರಿಯಾ ಸೇರಿದಂತೆ ಸೋಂಕಿತ ಸೊಳ್ಳೆಗಳ ಕಚ್ಚುವಿಕೆಯಿಂದ ಹರಡುವ ರೋಗಗಳ ನಿಯಂತ್ರಣಕ್ಕೆ ಜನತೆ ಸಹಕಾರ ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರ ಬಾಬು ಮನವಿ ಮಾಡಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ರಾಯಚೂರು ಇವರ ಮೂಲಕ ಹಮ್ಮಿಕೊಂಡ ವಿಶ್ವ ಮಲೇರಿಯಾ ದಿನದ ಜಾಗೃತಿ ಜಾಥಾ ಚಾಲನೆ ನೀಡಿ ಮಾತನಾಡುತ್ತಾ, ಜಿಲ್ಲೆಯಲ್ಲಿ ದಶಕಗಳ



ಹಿಂದೆ ಪ್ರತಿದಿನ ವರದಿಯಾಗುತ್ತಿದ್ದ ಮಲೇರಿಯಾ ಪ್ರಕರಣಗಳು ಇಲಾಖೆಯ ಎಲ್ಲ ಹಂತದ ಅಧಿಕಾ-ರಿಗಳು ಸಿಬ್ಬಂದಿಯರ ಪರಿಶ್ರಮದಿಂದ ಇಂದು ಲಿಂಗಸೂಗೂರು ತಾಲೂಕಿನ ಕೃಷ್ಣಾ ನದಿಯ ದ್ವೀಪ ಪ್ರದೇಶದ ಕೆಲವು ಹಳ್ಳಿಗಳಲ್ಲಿ ಪ್ರಕರಣ ಕಂಡು ಬರುತ್ತಿದ್ದು, ನಿರಂತರವಾಗಿ ನಿಗಾವಹಿಸಿ ನಿಯಂತ್ರಣ ಮಾಡಲಾಗಿದೆ ಎಂದು ತಿಳಿಸಿದರು.

ಅಲ್ಲದೆ ನಗರದ ಎಲ್ಲ ಪ್ರದೇಶಗಳಲ್ಲಿ ಮನೆಯ ಸುತ್ತಲಿನ ಜಾಗಗಳಲ್ಲಿ ಶಾಶ್ವತ ನೀರು ನಿಲ್ಲುವ ಸ್ಥಳಗಳಿದ್ದರೆ, ನೀರು ನಿಲ್ಲದಂತೆ ನಿಗಾ ವಹಿಸಲು ಜನತೆಗೆ ಜಾಗೃತಿ ನೀಡಲು ತಿಳಿಸಿದರು. ಮುಖ್ಯವಾಗಿ ಮಲೇರಿಯಾ ಹರಡುವ ಅನಾಫೀಲಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ಗುರ್ತಿಸುವುದು, ಕೀಟ ನಾಶಕ ಸಿಂಪರಣೆಗೆ ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದು ತಿಳಿಸಿದರು. ಜಿಲ್ಲಾ ಸರ್ವೆಕ್ಷಣಾಧಿಕಾರಿ ಹಾಗೂ ಮಲೇ-ರಿಯಾ ನಿಯಂತ್ರಣ ಅಧಿಕಾರಿ ಡಾ ಗಣೇಶ್ ಕೆ ಮಾತನಾಡಿ, ಮಲೇರಿಯಾ ಜ್ವರವು ಪ್ಲಾಸ್ಮೋಡಿಯಂ ಎಂಬ ಪರಾವಲಂಬಿ ಸೂಕ್ಷ್ಮಾಣುವಿನಿಂದ ಉಂಟಾಗಬಹುದಾಗಿದ್ದು, ಹೆಣ್ಣು ಅನಾಫಿಲೀಸ್ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಮಲೇರಿಯಾ ರೋಗ ಲಕ್ಷಣಗಳು: ಚಳಿ, ನಡುಕ, ಬಿಟ್ಟು ಬಿಟ್ಟು ಜ್ವರ ಬರುವುದು, ವಾಕರಿಕೆ, ಮೈ ಬೆವರುವುದು ಲಕ್ಷಣಗಳಾಗಿವೆ.

ಈ ಲಕ್ಷಣಗಳು ಕಂಡು ಬಂದಲ್ಲಿ ಮಲೇರಿಯಾ ಜ್ವರ ಇರಬಹುದು ಎಂದು ಭಾವಿಸಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ರಕ್ತ ಲೇಪನ ಪರೀಕ್ಷೆಗೆ ಒಳಪಟ್ಟು ಖಚಿತಪಟ್ಟಲ್ಲಿ ಸೂಕ್ತ ಉಚಿತ ಚಿಕಿತ್ಸೆ ಪಡೆದು ಗುಣ ಹೊಂದಬಹುದಾಗಿದೆ ಎಂದು ಹೇಳಿದರು.

ನಿಯಂತ್ರಣಕ್ಕೆ ಸಹಕಾರ: ಅಲ್ಲದೆ ಮಲೇರಿಯಾ ಪ್ರಕರಣಗಳ ತಡೆಗೆ ಮನೆಯ ಒಳಭಾಗ ಆರೋಗ್ಯ ಇಲಾಖೆಯಿಂದ ಕೈಗೊಳ್ಳುವ ಕೀಟನಾಶಕ ಸಿಂಪರಣೆಗೆ ಸಾರ್ವಜನಿಕರು ಸಹಕರಿಸಬೇಕು. ಸ್ವಯಂ ರಕ್ಷಣಾ ಕ್ರಮಗಳಾದ ಮಲಗುವಾಗ ಸೊಳ್ಳೆ ಪರದೆ ಬಳಕೆ ಮಾಡಬೇಕು. ಕಿಟಕಿಗಳಿಗೆ ಸೊಳ್ಳೆಗಳು ನುಸುಳದಂತೆ ಜಾಲರಿ ಅಳವಡಿಸುವುದು. ಆರೋಗ್ಯ ಇಲಾಖೆಯಿಂದ ನೀಡಲ್ಪಡುವ ಲಾರ್ವಹಾರಿ ಗಪ್ಪಿ ಮತ್ತು ಗಂಬೂಷಿಯಾ ಮೀನುಗಳನ್ನು ಶಾಶ್ವತವಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಬಿಡಲು ಉಚಿತವಾಗಿ ಪಡೆಯಬಹುದಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ ಮಹಮ್ಮದ್ ಶಾಕೀರ್, ತಾಲೂಕಾ ಆರೋಗ್ಯಾಧಿಕಾರಿ ಡಾ ಅಮೃತ ಹುಕ್ಕೇರಿ, ಸೇರಿದಂತೆ ವೈದ್ಯಾಧಿಕಾ-ರಿಗಳು, ಆರೋಗ್ಯ ಶಿಕ್ಷಣಾಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಪಿಹೆಚ್‌ಸಿಓ, ಎಮ್‌ಟಿಎಸ್, ಸಿಬ್ಬಂದಿಯವರು, ನರ್ಸಿಂಗ್ ವಿಧಗಯಾರ್ಥಿನಿಯರು. ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

ಬಿಇಎಲ್ ನೇಮಕಾತಿ 2026–43 ಹಿರಿಯ ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 28, 2026 ಬಿಇಎಲ್ ನೇಮಕಾತಿ 2026: 43 ಹಿರಿಯ ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಬಿಇಎಲ್ ಅಧಿಕೃತ ಅಧಿಸೂಚನೆ ಏಪ್ರಿಲ್ 2026 ರ ಮೂಲಕ ಹಿರಿಯ ಸಹಾಯಕ ಎಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 18–ಮೇ–2026 ರಂದು ಅಥ–ವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 28–04–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 18–ಮೇ–2026 ಇಲ್ಲಿ ಅಧಿಕೃತ ವೆಬ್‌ಸೈಟ್: bel-india.in

## ದ್ವಿತೀಯ ಪಿಯುಸಿ ಪರೀಕ್ಷೆ–2 ಸುಸೂತ್ರವಾಗಿ ನಡೆಸಿ–ಅಪರ ಜಿಲ್ಲಾಧಿಕಾರಿ ಶಿವಾನಂದ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ದ್ವಿತೀಯ ಪಿಯುಸಿ ಪರೀಕ್ಷೆ–2. ರಾಯಚೂರು ಜಿಲ್ಲೆಯಲ್ಲಿ ಯಾವುದೇ ರೀತಿಯ ಸಮಸ್ಯೆಗಳಾಗದಂತೆ ಸುಸೂತ್ರವಾಗಿ ನಡೆಸಿ ಎಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಹೇಳಿದರು ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಕರೆದ ದ್ವಿತೀಯ ಪಿಯುಸಿ ಪರೀಕ್ಷೆ– 2 ರ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.**



ಏಪ್ರಿಲ್. 30 ರಿಂದ ಮೇ. 13 ರವರೆಗೆ ಜಿಲ್ಲೆಯಲ್ಲಿ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆ–2 ಯಾವುದೇ ಸಮಸ್ಯೆಗಳಾಗದಂತೆ ನಡೆಸಬೇಕು. ಪರೀಕ್ಷೆಗೆ ನಿಯೋಜಿತ ಅಧಿಕಾರಿ ಮತ್ತು ಸಿಬ್ಬಂದಿಗಳು ತಮಗೆ ನಿಗದಿಪಡಿಸಿದ ಸಮಯಕ್ಕೆ ಪರೀಕ್ಷಾ ಕೇಂದ್ರಗಳಲ್ಲಿ ಹಾಜ–ರಿರಬೇಕು. ಜಿಲ್ಲೆಯಲ್ಲಿ ಒಟ್ಟು 6 ಪರೀಕ್ಷಾ ಕೇಂದ್ರಗಳಿದ್ದು. ರಾಯಚೂರು ತಾಲ್ಲೂಕಿನಲ್ಲಿ ಎರಡು. ಲಿಂಗಸೂಗುರು ತಾಲ್ಲೂಕಿನಲ್ಲಿ ಒಂದು. ದೇವದುರ್ಗ ತಾಲ್ಲೂಕಿನಲ್ಲಿ ಒಂದು. ಸಿಂಧನೂರು ತಾಲ್ಲೂಕಿನಲ್ಲಿ ಒಂದು ಹಾಗೂ ಮಾನವಿ ತಾಲ್ಲೂಕಿನಲ್ಲಿ ಒಂದು ಸೇರಿ ಒಟ್ಟು 6 ಪರೀಕ್ಷಾ ಕೇಂದ್ರಗಳು ಜಿಲ್ಲೆಯಲ್ಲಿದ್ದು ಯಾವುದೇ ಕೇಂದ್ರಗಳಲ್ಲಿ ಸಮಸ್ಯೆಗಳಾಗದಂತೆ ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳು ನೋಡಿಕೊಳ್ಳಬೇಕೆಂದರು. ಎಸ್.ಎಸ್.ಎಲ್.ಸಿ ಯಲ್ಲಿ ಬಂದ ಉತ್ತಮ ಫಲಿತಾಂಶ ಪಿಯುಸಿ ಯಲ್ಲಿ ಬರುವಂತೆ ಎಲ್ಲರೂ ಶ್ರಮಿಸಬೇಕು. ತಮಗೆ ಏನಾದರೂ ಸಮಸ್ಯೆಗಳಾದರೆ ನಮ್ಮ ಗಮನಕ್ಕೆ ತರಬೇಕು ದ್ವಿತೀಯ ಪಿಯುಸಿ ಪರೀಕ್ಷೆ–1 ಯಶಸ್ವಿಯಾಗಿ ನಡೆಸಿದಂತೆ ದ್ವಿತೀಯ ಪಿಯುಸಿ ಪರೀಕ್ಷೆ–2 ನ್ನು ಯಶಸ್ವಿಯಾಗಿ ನಡೆಸಬೇಕು.

ಈಗಾಗಲೇ ರೂಟ್ ಆಫೀಸರ್. ಎಕ್ಸಾಮ ಚೆಫ್ ಸೇರಿದಂತೆ ಇತರರು ಪರೀಕ್ಷೆಗೆ ನಿಯೋಜಿತ ಎಲ್ಲರೂ ಉತ್ತಮವಾಗಿ ಕರ್ತವ್ಯ ನಿರ್ವಹಿಸಬೇಕೆಂದು ಹೇಳಿದರು. ಈ ಸಭೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರಪ್ಪ ಹೊಕ್ರಾಣಿ. ಜಿಲ್ಲಾ ಖಜಾನಾಧಿಕಾರಿ ಸಿದ್ರಾಮೇಶ್ವರ. ಸೇರಿದಂತೆ ರೂಟ್ ಆಫೀಸರ. ಎಕ್ಸಮ್ ಚೀಫ್ ಹಾಗೂ ಇತರರು ಉಪಸ್ಥಿತರಿದ್ದರು.

## ಅಂಬೇಡ್ಕರ್ ಭವನಕ್ಕೆ ಹೆಚ್ಚುವರಿ ರೂ.3 ಕೋಟಿ ಅನುದಾನ : ಸಚಿವ ಎಸ್.ಎಸ್.ಎಂ. ಭರವಸೆ

ನೈಜ್ಯ ದೆಸೆ ನ್ಯೂಸ್

**ಹರಿಹರ: ಉದ್ದೇಶಿತ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಹೆಚ್ಚುವರಿಯಾಗಿ ರೂ.3 ಕೋಟಿ ಅನುದಾನ ಕೊಡಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ ಭರವಸೆ ನೀಡಿದರು. ನಗರದ ಹಳೇ ಕೋರ್ಟ್ ಸ್ಥಳದಲ್ಲಿ ಮಂಗಳವಾರ ಡಾ.ಬಿ. ಆರ್.ಅಂಬೇಡ್ಕರ್ ಸಮುದಾಯ ಭವನದ ಕಾಮಗಾ–ರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.**



ಭವನ ನಿರ್ಮಾಣಕ್ಕೆ ಈಗಾಗಲೇ ರೂ.2 ಕೋಟಿ ಅನುದಾನ ಮಂಜೂರಾಗಿದ್ದು ರೂ.50 ಲಕ್ಷ ಬಿಡುಗಡೆಯಾಗಿದೆ. ನಿವೇಶನ ನಗರದ ಹೃದಯ ಭಾಗದಲ್ಲಿರುವುದರಿಂದ ವ್ಯವಸ್ಥಿತ ಹಾಗೂ ಆಕರ್ಷಕ ವಿನ್ಯಾಸದೊಂದಿಗೆ ನಿರ್ಮಾಣ ಮಾಡಬೇಕಾಗಿದೆ. ಇದಕ್ಕಾಗಿ ಹೆಚ್ಚುವರಿಯಾಗಿ ರೂ.3 ಕೋಟಿ ಅನುದಾನ ಕೊಡಿಸುತ್ತೇನೆ ಎಂದು ಭರವಸೆ ನೀಡಿದರು. ಅಂಬೇಡ್ಕರರವರ ಆಶಯದಂತೆ ಈ ಭವನ ನಿರ್ಮಾಣವಾಗಬೇಕು ಅಲ್ಲದೆ ಎಲ್ಲಾ ವರ್ಗದವರು ಇದರ ಉಪಯೋಗ ಪಡೆಯುವಂತಾಗಬೇಕು. ಆಗ ಈ ಭವನ ನಿರ್ಮಾಣ ಕಾರ್ಯ ಸಾರ್ಥಕವಾಗುತ್ತದೆ ಎಂದರು. ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳು ಜನ ಸಾಮಾನ್ಯರ ಬದುಕಲ್ಲಿ ಬೆಳಕನ್ನು ಮೂಡಿಸಿದೆ. ಬಡವ, ಬಲ್ಲಿದ, ಮೇಲು, ಕೀಳು ಯಾವ ಭಿನ್ನತೆಯನ್ನು ಪರಿಗಣ ಸಿದೆ ಎಲ್ಲಾ ವರ್ಗದವರಿಗೂ ಗ್ಯಾರಂಟಿ ಯೋಜನೆಗಳ ಲಾಭ ದೊರೆಯುತ್ತಿದೆ ಎಂದ ಅವರು ನುಡಿದಂತೆ ನಡೆದ ಸರ್ಕಾರ ದೇಶದಲ್ಲಿ ನಮ್ಮದೆ ಎಂದರು. ಪೌರಕಾರ್ಮಿಕರಿಗೆ ನಿವೇಶನವಿಲ್ಲ ಸಾರ್ ಅದನ್ನು ನೇರವೇರಿಸಿ ಎಂದು ಪೌರಕಾರ್ಮಿಕರ ಕೇಳಿದಾಗ ಕುಡಿಯುವ ನೀರು, ರಸ್ತೆ ಸೇರಿದಂತೆ ಮೂಲ ಭೂತ ಸೌಕರ್ಯ ನೀಡುವ ಕೆಲಸವನ್ನು ಕ್ಷೇತ್ರದ ಶಾಸಕರು ಗಮನ ಹರಿಸಬೇಕು. ಆದರೆ ನಿಮ್ಮ ಶಾಸಕರಿಗೆ ನಮ್ಮನ್ನು ತೆಗಳುವುದೇ ಕಾಯಕವಾಗಿದೆ ಎಂದ ಅವರು ನಮ್ಮ ಕಚೇರಿಗೆ ಬನ್ನಿ ಪರೀಶಿಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು. ಈ ವೇಳೆ ಮಾಜಿ ಶಾಸಕ ಎಸ್.ರಾಮಪ್ಪ, ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಚ್.ಮರಿಯೋಜಿ ರಾವ್, ತಾಲ್ಲೂಕು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ, ಜಿ.ಬಿ.ಹಾಲೇಶ್ ಗೌಡರು, ನಿಖಿಲ್ ಕೊಂಡಜ್ಜಿ,ಎಲ್.ಬಿ.ಹನುಮಂತಪ್ಪ,ಪಿ. ಜೆ.ಮಹಾಂತೇಶ್ ಸೇರಿದಂತೆ ದಲಿತ ಸಂಗಟನೆಗಳ ಪದಾಧಿಕಾ–ರಿಗಳು ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

## 3ನೇ ರಾಜ್ಯ ಮಟ್ಟದ ವಿಶ್ವಕರ್ಮ ವಧು ವರರ ಸಮಾವೇಶ–2026 ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಚನ್ನಪ್ಪ ಕೆ. ಹೊಸಹಳ್ಳಿ ಅವರಿಗೆ ಗೌರವ ಸಲ್ಲಿಕೆ



ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯ ಘಟಕದ ವತಿಯಿಂದ ಹಮ್ಮಿಕೊಂಡಿದ್ದ 3ನೇ ರಾಜ್ಯ ಮಟ್ಟದ ವಿಶ್ವಕರ್ಮ ವಧುವರರ ಅನ್ವೇಷಣೆ ಕಾರ್ಯಕ್ರಮದಲ್ಲಿ ಸಿಂಧನೂರಿನ ಚನ್ನಪ್ಪ ಕೆ ಹೊಸಹಳ್ಳಿ ಅವರ ಕಾರ್ಯಕ್ರಮದಲ್ಲಿ ಊಟದ ಉಸ್ತುವಾರಿಯಾಗಿ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಿದ್ದಕ್ಕಾಗಿ ಸನ್ಮಾನಿಸಿ ಗೌರವಿಸಲಾಯಿತು.

ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯಾಧ್ಯಕ್ಷರಾದ ಕೆ.ಪಿ.ನಂಜುಂಡಿ ವಿಶ್ವಕರ್ಮ ಅವರ ನೇತೃತ್ವದಲ್ಲಿ ವಿಶ್ವಕರ್ಮ ಮಠಾದೀಶ್ವರ ಮತ್ತು ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ,ಹಿರಿಯರಾದ ಶ್ರೀ ಬಸವರಾಜ ಮದ್ದೂರ ಸಮಾವೇಶದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರ ಮತ್ತು ರಾಜ್ಯದ ವಿವಿಧ ಜಿಲ್ಲೆ,ತಾಲೂಕು ಮತ್ತು ಗ್ರಾಮಗಳಿಂದ ಆಗಮಿಸಿದ ಸಮಾಜದ ಮುಖಂಡರುಗಳ ಸಮ್ಮುಖದಲ್ಲಿ 3ನೇ ರಾಜ್ಯ ಮಟ್ಟದ ವಿಶ್ವಕರ್ಮ ವಧು ವರರ ಸಮಾವೇಶ –2026 ಸಮಾರೋಪ ಸಮಾರಂಭ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು. ಕಾರ್ಯಕ್ರಮದ ಉದ್ಘಾಟಕರಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಾಗೂ ಮಾಜಿ ಯಶವಂತಪುರ ಮತಕ್ಷೇತ್ರದ ಶಾಸಕರಾದ ಎಸ್.ಟಿ.ಸೋಮಶೇಖರ ಅವರು ವಿಶೇಷ ಅತಿಥಿಗಳಾಗಿ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಸಂಧರ್ಭದಲ್ಲಿ ಸಮಾರಂಭಕ್ಕೆ ಆಗಮಿಸಿದ ಬಂಧುಗಳಿಗೆ ಊಟದ ಉಸ್ತುವಾ–ರಿಯಾಗಿ ಊಟದ ವ್ಯವಸ್ಥೆಯನ್ನು ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸಿದ್ದಕ್ಕಾಗಿ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಯಚೂರು ಜಿಲ್ಲಾ ಯುವ ಘಟಕ ಪ್ರಧಾನ ಕಾರ್ಯದರ್ಶಿ ಹಾಗೂ ಸಿಂಧನೂರು ತಾಲೂಕ ವಿಶ್ವಕರ್ಮ ಸಮಾಜ ಸಂಘಟನಾ ಕಾರ್ಯದರ್ಶಿಗಳಾದ ಚನ್ನಪ್ಪ ಕೆ. ಹೊಸಹಳ್ಳಿ ಅವರಿಗೆ ಸವಿ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿ ಗೌರವಿಸಲಾಯಿತು. 6ಈ ಸಂಧರ್ಭದಲ್ಲಿ ಕೆ.ಪಿ.ಸಿ.ಸಿ. ಕುಶಲಕರ್ಮಿ ವಿಭಾಗ ರಾಜ್ಯಾಧ್ಯಕ್ಷರಾದ ಪ್ರಸನ್ನಕುಮಾರ್ ಚಳ್ಳಿಕೆರೆ,ರವಿಕುಮಾರ ರಾಜ್ಯ ಯುವ ಮುಖಂಡರು,ರಾಜ್ಯ ಉಪಾಧ್ಯಕ್ಷರಾದ ಅಶೋಕ ಪೊದ್ದಾರ, ನಾಗಲಿಂಗಪ್ಪ ಪತ್ತಾರ,ಕೊಪ್ಪಳ ಜಿಲ್ಲಾಧ್ಯಕ್ಷರಾದ ವೀರೇಶ ಪತ್ತಾರ, ಸಿರಗುಪ್ಪ ತಾಲೂಕ ಅಧ್ಯಕ್ಷ ಮೌನೇಶ ಆಚಾ–ರಿ,ತೆಕ್ಕಲಕೋಟೆ ಹೋಬಳಿ ಅಧ್ಯಕ್ಷ ಬಸವರಾಜ ಹಾಗೂ ಚನ್ನಪ್ಪ ಬಡಿಗೇರ ಕೆ.ಹೊಸಹಳ್ಳಿ ಹಾಗೂ ವಿವಿಧ ಜಿಲ್ಲೆ ತಾಲೂಕು,ಹೋಬಳಿಗಳ ಅಧ್ಯಕ್ಷರು,ಪದಾಧಿಕಾರಿಗಳು ಉಪಸ್ಥಿತರಿದ್ದರು.

## ರಸ್ತೆ ಅಪಘಾತದಲ್ಲಿ ಮೃತಪಟ್ಟ ಕುಟುಂಬಕ್ಕೆ ಶಾಸಕ ಹಂಪಯ್ಯ ನಾಯಕರಿಂದ ಸಾಂತ್ವಾನ ಸರ್ಕಾರದಿಂದ ಪರಿಹಾರ ನೀಡುವ ಭರವಸೆ

ನೈಜ್ಯ ದೆಸೆ ನ್ಯೂಸ್

**ಸಿರವಾರ: ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಿರವಾರ ತಾಲೂಕಿನ ಶಾಕಾಪುರ್ ಗ್ರಾಮದಲ್ಲಿ ಟಿಪ್ಪರ್ ಹಾಗೂ ಬೈಕ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ಹಿನ್ನೆಲೆಯಲ್ಲಿ, ಮಾನ್ವಿ ಕ್ಷೇತ್ರದ ಶಾಸಕ ಜಿ. ಹಂಪಯ್ಯ ನಾಯಕ ಸಾಹುಕಾರ್ ಅವರು ಸಿರವಾರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಮೃತರ ಕುಟುಂಬಸ್ಥರಿಗೆ ಸಾಂತ್ವಾನ ಹೇಳಿದರು.**



ಘಟನೆಯ ಕುರಿತು ಮಾಹಿತಿ ಪಡೆದ ತಕ್ಷಣ ಆಸ್ಪತ್ರೆಗೆ ಆಗಮಿಸಿದ ಶಾಸಕರು ಕುಟುಂಬ ಸದಸ್ಯರಿಗೆ ಧೈರ್ಯ ತುಂಬಿ, ದುಃಖದಲ್ಲಿ ಭಾಗಿಯಾಗಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಜಾತ್ರೆಗೆ ಆಗಮಿಸಿ ದೇವರ ದರ್ಶನ ಪಡೆದು ವಾಪಸ್ ತೆರಳುವ ವೇಳೆ ಈ ದುರ್ಘಟನೆ ಸಂಭವಿಸಿರುವುದು ಅತ್ಯಂತ ದುರ್ವಿದಿಯ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಲಾರಿ ಮಾಲೀಕರು ಎಷ್ಟೇ ಪ್ರಭಾವಿಗಳಾಗಿದ್ದರೂ ಕಾನೂನು ಪ್ರಕಾರ ಪ್ರಕರಣ ದಾಖಲಿಸಬೇಕು ಎಂದು ಸಿಪಿಐ ಅವರಿಗೆ ಸೂಚನೆ ನೀಡಿರುವುದಾಗಿ ತಿಳಿಸಿದರು. ಜೊತೆಗೆ ಮುಖ್ಯಮಂತ್ರಿಗಳ ಗಮನಕ್ಕೆ ವಿಷಯವನ್ನು ತೆಗೆದುಕೊಂಡು ಸರ್ಕಾರದಿಂದ ಪರಿಹಾರ ದೊರಕುವಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಡಾ. ಬಸವನಗೌಡ ಗಣದಿನ್ನಿ, ಡಾ. ಮಲ್ಲಿಕಾರ್ಜುನ ನಂದಾರೇಡ್ಡಿ ಹಾಗೂ ಸಿಪಿಐ ಶಶಿಕಾಂತ ಎಂ. ಉಪಸ್ಥಿತರಿದ್ದರು.

## ಸಿದ್ದಾರ್ಥ ಪಡಶೆಟ್ಟಿ ರಾಜ್ಯಕ್ಕೆ ಒಂಬತ್ತನೇ ಸ್ಥಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಚಬನೂರ ಗ್ರಾಮದ ಕ್ರಾಸ್ ನಲ್ಲಿರುವ ಶ್ರೀ ತಾಯಮ್ಮ ಆಂಗ್ಲ ಮಾಧ್ಯಮ ಶಾಲೆಗೆಯ ಹತ್ತನೇ ತರಗತಿಯ ವಿದ್ಯಾರ್ಥಿ ಸಿದ್ಧಾರ್ಥ ಶ್ರೀಶೈಲ ಪಡಶೆಟ್ಟಿ 2025–26 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ 625 ಕ್ಕೆ617 ( ಶೇ.98. 72) ರಾಜ್ಯಕ್ಕೆ 9 ನೇ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾನೆ. ಇದೇ ಶಾಲೆ ವಿದ್ಯಾರ್ಥಿಗಳಾದ ಕುಮಾರ ಸೋಮಶೇಖರ ನಾಡಗೌಡ 601 ಶೇ (96.16) ಶಾಲೆಗೆ ದ್ವಿತೀಯ, ಕುಮಾರ ಯಶವಂತ ರಾಮನಗೌಡ ಚೌದ್ರಿ 598 ಶೇ(95.72) ಶಾಲೆಗೆ ತೃತೀಯ, ಕುಮಾರ ಅನೀಲ ಉಪ್ಪಾರ 593 ಶೇ( 94.88), ಕುಮಾರ ಪವನಕುಮಾರ ಬಜ್ಜಿ 588 ಶೇ(**







94.08 ) ಕುಮಾರಿ ಭಾಗ್ಯಶ್ರೀ ತಿಳಗೂಳ 584 ಶೇ( 93.44), ಕುಮಾರ ಸಂದೀಪ ಬೂದಿಹಾಳ 568 ಶೇ( 90.88 ), ಕುಮಾರ ಶರತ್ ಹೂಗಾರ 527 ಶೇ ( 84.32), ಕುಮಾರ ಭರತ ಬಿರಾದಾರ 522 ಶೇ( 83.52), ಕುಮಾರ ಪ್ರಜ್ವಲ್ ಹೊಸಮನಿ 486 ಶೇ(77.76) ಅಂಕಗಳನ್ನು ಪಡೆದುಕೊಂಡಿದ್ದಾರೆ. ಪರೀಕ್ಷೆಗೆ ಕುಳಿತ 10 ವಿದ್ಯಾರ್ಥಿಗಳಲ್ಲಿ7 ವಿದ್ಯಾರ್ಥಿಗಳು 90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದುಕೊಂಡು ಪಾಸಾಗಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷರಾದ ಶರಣಯ್ಯ ಹಿರೇಮಠ, ಉಪಾಧ್ಯಕ್ಷರಾದ ಶಶಿಧರ ಹಯ್ಯಾಳ,ಶಾಲೆಯ ಮುಖ್ಯೋಪಾಧ್ಯಯ ಬಿ.ಎನ್.ಸಿದರಡ್ಡಿ ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಕಲಿಕೆಯ ಜೊತೆ ಸಂಸ್ಕಾರ ಮುಖ್ಯ–ಆರ್ ಬಸನಗೌಡ ತುರುವಿಹಾಳ.

ನೈಜ್ಯ ದೆಸೆ ನ್ಯೂಸ್

**ತುರ್ವಿಹಾಳ: ಕಲಿಕೆ ಎಂದರೆ ಕೇವಲ ಪುಸ್ತಕದ ಜ್ಞಾನವನ್ನು ಗಳಿಸುವುದಲ್ಲ. ಅದು ನಮ್ಮ ಬುದ್ಧಿಯನ್ನು ಬೆಳಸುತ್ತದೆ. ಆದರೆ ಸಂಸ್ಕಾರವು ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಒಬ್ಬ ವ್ಯಕ್ತಿ ಎಷ್ಟು ವಿದ್ಯಾವಂತನಾದರೂ, ಅವನಲ್ಲಿ ಸಂಸ್ಕಾರವಿಲ್ಲದಿದ್ದರೆ, ಅವನ ವಿದ್ಯೆಗೆ ಪೂರ್ಣತೆ ಇರುವುದಿಲ್ಲ ಎಂದು ಶಾಸಕರಾದ ಆರ್ ಬಸನಗೌಡ ತುರುವಿಹಾಳ ರವರ ಅಭಿಪ್ರಾಯಪಟ್ಟರು.**




ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2025–26ನೇ ಸಾಲಿನ ಬಿ ಎ ಮತ್ತು ಬಿ ಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ವಿವಿಧ ಘಟಕಗಳ ಚಟುವಟಿ–ಕೆಗಳ ಸಮಾರೋಪ ಸಮಾರಂಭದ ಉದ್ಘಾಟನೆ ಮಾಡಿ ಮಾತನ್ನಡುತ್ತಾ ಸಂಸ್ಕಾರವೆಂದರೆ ಶಿಸ್ತಿನ ನಡೆ, ಹಿರಿಯ–ರಿಗಾದ ಗೌರವ, ಕಿರಿಯರಿಗಾದ ಪ್ರೀತಿ, ಸಮಾಜದ ಬಗ್ಗೆ ಹೊಣೆಗಾರಿಕೆ. ಇವುಗಳು ನಮ್ಮ ಜೀವನವನ್ನು ಸಾಥ–ರ್ಕಗೊಳಿಸುತ್ತವೆ. ಶಾಲೆಯಲ್ಲಿ ನಾವು ಪಾಠಗಳನ್ನು ಕಲಿಯುವುದರ ಜೊತೆಗೆ, ನಡತೆ, ಸಮಯಪಾಲನೆ, ಶ್ರಮದ ಮೌಲ್ಯ ಇತ್ಯಾದಿಗಳನ್ನು ಸಹ ಕಲಿಯಬೇಕು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯೆ ಅಗತ್ಯವೇ ಸರಿ, ಆದರೆ ಅದನ್ನು ಸಮರ್ಪಕವಾಗಿ ಬಳಸಲು ಸಂಸ್ಕಾರವೂ ಅಗತ್ಯ. ಸಂಸ್ಕಾರವಿರುವ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉತ್ತಮ ನಾಗರಿಕರಾಗುತ್ತಾರೆ ಮತ್ತು ಸಮಾಜಕ್ಕೆ ಮಾದರಿಯಾಗುತ್ತಾರೆ. ಎಂದು ಹೇಳಿದರು. ಈ ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಆಗಮಿಸಿದ ಸಿಂಧನೂರಿನ ಡಿ ವೈ ಎಸ್ ಪಿ ಗಳಾದ ಚಂದ್ರಶೇಖರ ಜಿ ರವರು ಮಾತನ್ನಡುತ್ತಾ ನಮ್ಮ ಜೀವನದಲ್ಲಿ ಸಾಧನೆ ಎಂದರೆ ಒಂದೇ ದಿನದಲ್ಲಿ ಸಿಗುವ ಫಲವಲ್ಲ. ಅದು ದಿನದಿಂದ ದಿನಕ್ಕೆ, ಹೆಜ್ಜೆ ಹೆಜ್ಜೆಯಾಗಿ ಮಾಡಿದ ನಿರಂತರ ಪ್ರಯತ್ನದ ಫಲ. ಈ ವಿಷಯವು ವಿದ್ಯಾರ್ಥಿಗಳಿಗೂ, ಯುವಕರಿಗೂ, ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ಬಯಸುವ ಪ್ರತಿಯೊಬ್ಬರಿಗೂ ಅತ್ಯಂತ ಪ್ರೇರಣಾದಾಯಕವಾಗಿದೆ.

ನಿರಂತರ ಪ್ರಯತ್ನವು ನಮ್ಮನ್ನು ಸಾಮಾನ್ಯ ವ್ಯಕ್ತಿಯಿಂದ ಅಸಾಮಾನ್ಯ ಸಾಧಕರನ್ನಾಗಿ ರೂಪಿಸುತ್ತದೆ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜೀವನವೂ ಇದಕ್ಕೆ ಉತ್ತಮ ಉದಾಹರಣೆ?ಸಾಧಾರಣ ಕುಟುಂಬದಿಂದ ಬಂದವರು ತಮ್ಮ ಪರಿಶ್ರಮದಿಂದ ಭಾರತದ ರಾಷ್ಟ್ರಪ–ತಿಯಾಗಿದರು.ಸಾಧನೆಯ ಮೌಲ್ಯವನ್ನು ಅರಿಯಲು ಸಹಾಯ ಮಾಡುತ್ತದೆ. ಸುಲಭವಾಗಿ ಸಿಕ್ಕದ್ದಕ್ಕಿಂತ, ಪರಿಶ್ರಮದಿಂದ ಸಿಕ್ಕ ಸಾಧನೆ ಹೆಚ್ಚು ಸಂತೋಷ ಮತ್ತು ತೃಪ್ತಿ ನೀಡುತ್ತದೆ.ಎಂದು ಹೇಳಿದರು. ಮಾನವನಾಗಿ ಹುಟ್ಟುವುದು ದೊಡ್ಡ ಭಾಗ್ಯ. ಆದ–ರೆ ಕೇವಲ ಹುಟ್ಟುವುದರಿಂದ ಮಾತ್ರ ಜೀವನ ಸಾಥ–ರ್ಕವಾಗುವುದಿಲ್ಲ; ನಾವು ಹೇಗೆ ಬದುಕುತ್ತೇವೆ, ಸಮಾಜಕ್ಕೆ ಏನು ಕೊಡುಗೆ ನೀಡುತ್ತೇವೆ ಎಂಬುದೇ ಹುಟ್ಟಿನ ಸಾರ್ಥಕತೆಯನ್ನು ನಿರ್ಧರಿಸುತ್ತದೆ. ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಚಂದ್ರೆಗೌಡ ಪೊಲೀಸ್ ಪಾಟೀಲ್ ರು ಮಾತನ್ನಡುತ್ತಾ ಹುಟ್ಟಿನ ಸಾರ್ಥಕತೆ ಎಂದರೆ ಜೀವನದ ಉದ್ದೇಶವನ್ನು ಅರಿತು ಬದುಕುವುದು.

ಪ್ರತಿಯೊಬ್ಬರಿಗೂ ಒಂದೊಂದು ಸಾಮರ್ಥ್ಯ, ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿ, ಅಭಿವೃದ್ಧಿಪಡಿಸಿ, ಸಮಾಜದ ಹಿತಕ್ಕಾಗಿ ಬಳಸಿದಾಗ ನಮ್ಮ ಜೀವನಕ್ಕೆ ಅರ್ಥ ಬರುತ್ತದೆ. ಡಾ. ಕೆ ಖಾದರ್ ಭಾಷರವರು ಮಾತನ್ನಡುತ್ತಾ ಸೇವಾಭಾವ ಮತ್ತು ಮಾನವೀಯತೆ ಮುಖ್ಯ. ಇತರರ ನೋವನ್ನು ಅರ್ಥಮಾಡಿಕೊಳ್ಳುವುದು, ಸಾಧ್ಯವಾದ ಮಟ್ಟಿಗೆ ಸಹಾಯ ಮಾಡುವುದು, ಸಮಾಜದಲ್ಲಿ ಒಳ್ಳೆಯ ಬದಲಾವಣೆ ತರಲು ಪ್ರಯತ್ನಿಸುವುದು ಇವೆಲ್ಲವೂ ಹುಟ್ಟಿನ ಸಾರ್ಥಕತೆಯನ್ನು ಹೆಚ್ಚಿಸುತ್ತವೆ. ಉದಾಹರಣೆಗೆ, ಮದರ್ ತೆರೇಸಾ ತಮ್ಮ ಜೀವನವನ್ನೇ ಬಡವರ ಸೇವೆಗೆ ಅರ್ಪಿಸಿದರು ಎಂದರು ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಜಾಹಿರುದ್ಧಿನಸಾಬರವರು ಮಾತನ್ನಾಡಿ ಜ್ಞಾನ ಮತ್ತು ನೈತಿಕ ಮೌಲ್ಯಗಳೊಂದಿಗೆ ಬದುಕುವುದು ವಿದ್ಯಾಭ್ಯಾಸ, ಶಿಸ್ತು, ಪ್ರಾಮಾಣಿಕತೆ ಮತ್ತು ಸತ್ಪ್ರವೃತ್ತಿಗಳು ನಮ್ಮ ಜೀವನವನ್ನು ಉನ್ನತಮಟ್ಟಕ್ಕೆ ತೆಗೆದುಕೊಂಡು ಹೋಗುತ್ತವೆ. ಕೇವಲ ಸ್ವಾರ್ಥಕ್ಕಾಗಿ ಬದುಕುವುದಕ್ಕಿಂತ, ಸಮಾಜದ ಹಿತಕ್ಕಾಗಿ ಬದುಕುವುದು ಹೆಚ್ಚು ಮಹತ್ವದ್ದಾಗಿದೆ.

ಮುಖ್ಯ ಅತಿಥಿಗಳಾದ ವಿರೂಪಾಕ್ಷಪ್ಪ ಗಚ್ಚಿನಮನಿರವರ ಮಾತಾನ್ನಾಡಿದ ಹುಟ್ಟಿನ ಸಾರ್ಥಕತೆ ಎಂದರೆ ಸ್ವಾರ್ಥವಿಲ್ಲದೆ, ಜ್ಞಾನ, ಸೇವೆ, ಸತ್ಪ್ರವೃತ್ತಿಗಳ ಮೂಲಕ ಸಮಾಜಕ್ಕೆ ಒಳ್ಳೆಯದು ಮಾಡುವ ಜೀವನವನ್ನು ನಡೆಸುವುದು. ಅಂತಹ ಜೀವನವೇ ನಿಜವಾದ ಯಶಸ್ಸು ಮತ್ತು ಸಾರ್ಥಕತೆ ಎಂದರು, ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಮೌಲಾಸಾಬರವರು ಪ್ರಾಸ್ತಾವಿಕ ನುಡಿಗಳನ್ನು ಹೇಳಿ ವಾರ್ಷಿಕ ಶೈಕ್ಷಣಿಕ ಕಾರ್ಯಚಟುವಟಿಕೆಗಳ ವರದಿಯನ್ನು ವಾಚಿಸಿದರು. ಶ್ರೀಮತಿ ಗಂಗಾಬಾಯಿಯವರು ಸನ್ಮಾನ ಕಾರ್ಯ ನಿರ್ವಹಿಸಿದರು, ಬಹುಮಾನ ವಿತರಣೆಯನ್ನು ಪ್ರವೀಣ ಕುಮಾರ ಮತ್ತು ನೀಲಕಂಠಪ್ಪರವರು ನಿರ್ವಹಿಸಿದರು, ಡಾ. ಚನ್ನಬಸವ ನಿರೂಪಿಸಿದರು, ತಿಮ್ಮಯ್ಯ ಸ್ವಾಗತಿಸಿದರು, ಪ್ರವೀಣಕುಮಾರ ವಂದಿಸಿದರು.

ಈ ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯತ ಅಧ್ಯಕ್ಷರಾದ ಬಾಪುಗೌಡ ದೇವರಮನಿ, ಬಸವಚೇತನ ಕಾಲೇಜಿನ ಪ್ರಾಂಶುಪಾಲರಾದ ವಿರೂಪಾಕ್ಷಪ್ಪ ಗಚ್ಚಿನಮನಿ,ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಲ್ಲಪ್ಪ, ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಚಂದ್ರೆಗೌಡ ಪೊಲೀಸ್ ಪಾಟೀಲ್, ಸಿದ್ದರಾಮಯ್ಯ, ಯಂಕಪ್ಪ ಡಣಾಪುರ, ದುರುಗಪ್ಪ ಉಮಾಲೂಟಿ, ರಾಜಪ್ಪ, ಬಾಲಾಜಿ, ವೀರಭದ್ರಗೌಡ, ಸಾಯಿಕುಮಾರ, ಶಂಕರಲಿಂಗ, ಶಂಕರಲಿಂಗ ಕವಿತಾಳ, ಶ್ರೀಮತಿ ಲಕ್ಷ್ಮಿ ಸೋಮನಾಥ, ಶ್ರೀಮತಿ ರತ್ನಮ್ಮ, ಕು ವಜ್ರಮ್ಮ ಮತ್ತು ಡಾ. ವೆಂಕಟ–ರಮಣ, ದೇವಿದಾಸ, ಮೌಲಾಸಾಬ, ಮಹಾದೇವ ಗೋಪಾಲಕೃಷ್ಣ ಉಪಸ್ಥಿತರಿದ್ದರು, ಕಾಲೇಜಿನ ಎಲ್ಲಾ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು

## ಶಿಕ್ಷಣ ಮಾರ್ಗದರ್ಶಿ ವಿಶೇಷ

# ಬಿ.ಟೆಕ್ ಸೈಬರ್ ಸೆಕ್ಯುರಿಟಿ?

ಬಿ.ಟೆಕ್ ಸೈಬರ್ ಸೆಕ್ಯುರಿಟಿ ಬಿ.ಟೆಕ್ ಸೈಬರ್ ಸೆಕ್ಯುರಿಟಿ ಒಂದು 4 ವರ್ಷದ ಪದವಿ ಮಟ್ಟದ ಇಂಜಿನಿಯರಿಂಗ್ ಕೋರ್ಸ್ ಆಗಿದ್ದು, ಡಿಜಿಟಲ್ ವ್ಯವಸ್ಥೆಗಳು, ಕಂಪ್ಯೂಟರ್ ಜಾಲಗಳು ಮತ್ತು ಸಂವೇದನಾಶೀಲ ಮಾಹಿತಿಯನ್ನು ಸೈಬರ್ ದಾಳಿಗಳು ಹಾಗೂ ಹ್ಯಾಕಿಂಗ್‌ನಿಂದರಕ್ಷಿಸುವುದನ್ನು ಮುಖ್ಯ ಉದ್ದೇಶವಾಗಿಟ್ಟುಕೊಂಡಿದೆ. ಈ ಕೋರ್ಸ್‌ನಲ್ಲಿ ಕಂಪ್ಯೂಟರ್ ಸೈನ್ಸ್‌ನ ಮೂಲಭೂತ ವಿಷಯಗಳೊಂದಿಗೆ ಎಥಿಕಲ್ ಹ್ಯಾಕಿಂಗ್, ಕ್ರಿಪ್ಟೋಗ್ರಫಿ, ಡಿಜಿಟಲ್ ಫರೆನ್ಸಿಕ್ಸ್ ಮತ್ತು ನೆಟ್ವರ್ಕ್ ಭದ್ರತೆ ಮುಂತಾದ ಉನ್ನತ ಭದ್ರತಾ ತಂತ್ರಜ್ಞಾನಗಳನ್ನು ಕಲಿಸಲಾಗುತ್ತದೆ. ಡಿಜಿಟಲ್ ಯುಗದ ವೇಗವಾದ ಅಭಿವೃದ್ಧಿಯಿಂದ ಸೈಬರ್ ಸೆಕ್ಯುರಿಟಿ ವೃತ್ತಿಪರರಿಗೆ ವಿಶ್ವದಾದ್ಯಂತ ಹೆಚ್ಚಿನ ಬೇಡಿಕೆ ಇದ್ದು, ?6 ಲಕ್ಷದಿಂದ 25 ಲಕ್ಷ ವಾರ್ಷಿಕ ವೇತನ ಪಡೆಯುವ ಅವಕಾಶವಿದೆ. ಬಿ.ಟೆಕ್ ಸೈಬರ್ ಸೆಕ್ಯುರಿಟಿಯ ಪ್ರಮುಖ ಅಂಶಗಳು ಪಠ್ಯಕ್ರಮ (Curriculum) ವಿದ್ಯಾರ್ಥಿಗಳು ಮೊದಲು ಕಂಪ್ಯೂಟರ್ ಸೈನ್ಸ್ ಮೂಲಭೂತ ವಿಷಯಗಳನ್ನು ಹಾಗೂ ನಂತರ ವಿಶೇಷ ಸೈಬರ್ ಸೆಕ್ಯುರಿಟಿ ತರಬೇತಿಯನ್ನು ಅಧ್ಯಯನ ಮಾಡುತ್ತಾರೆ: ಪ್ರೋಗ್ರಾಮಿಂಗ್ ಮತ್ತು ಡೇಟಾ ಸ್ಟ್ರಕ್ಚರ್‌ಗಳು ಆಪರೇಟಿಂಗ್ ಸಿಸ್ಟಮ್ಸ್ ಕಂಪ್ಯೂಟರ್ ನೆಟ್ವರ್ಕ್ಸ್ ಅಲ್ಗಾರಿದಮ್ ವಿನ್ಯಾಸ ಎಥಿಕಲ್ ಹ್ಯಾಕಿಂಗ್ ಕ್ರಿಪ್ಟೋಗ್ರಫಿ ಮಾಲ್ವೇರ್ ವಿಶ್ಲೇಷಣೆ ಡಿಜಿಟಲ್ ಫರೆನ್ಸಿಕ್ಸ್ ಸುರಕ್ಷಿತ ಕೋಡಿಂಗ್ ಕ್ಲೌಡ್ ಮತ್ತು ನೆಟ್ವರ್ಕ್ ಭದ್ರತೆ ಪ್ರಾಯೋಗಿಕ ಕಲಿಕೆ (Practical Learning) ಲ್ಯಾಬ್ ಆಧಾರಿತ ಪ್ರಾಯೋಗಿಕ ತರಬೇತಿ ಸೈಬರ್ ದಾಳಿ ಅನುಕರಣೆ (Simulation) ನೈಜ ಪ್ರಾಜೆಕ್ಟ್ ಕಾರ್ಯಗಳು ಕೈಗಾರಿಕಾ ಸಹಭಾಗಿತ್ವ ಕಾರ್ಯಕ್ರಮಗಳು ಇಂಟರ್ನ್‌ಶಿಪ್ ಅವಕಾಶಗಳು ವೃತ್ತಿಪರ ಪ್ರಮಾಣಪತ್ರಗಳು ಬಹುತೇಕ ವಿಶ್ವವಿದ್ಯಾಲಯಗಳು ಕೆಳಗಿನ ಅಂತಾರಾಷ್ಟ್ರೀಯ ಪ್ರಮಾಣಪತ್ರಗಳನ್ನು ಒಳಗೊಂಡಿರುತ್ತವೆ: Certified Ethical Hacker (CEH) Certified Network Defender (CND) CISSP (ಉನ್ನತ ಭದ್ರತಾ ಪ್ರಮಾಣಪತ್ರ) ಕೋರ್ಸ್ ಅವಧಿ 4 ವರ್ಷಗಳು 8 ಸೆಮಿಸ್ಟರ್‌ಗಳು ?? ಅರ್ಹತೆ ಮತ್ತು ಪ್ರವೇಶ (Eligibility & Admission) ವಿದ್ಯಾರ್ಹತೆ 10+2 (PUC) ನಲ್ಲಿ: ಭೌತಶಾಸ್ತ್ರ ಗಣಿತ ರಸಾಯನಶಾಸ್ತ್ರ / ಜೈವ ತಂತ್ರಜ್ಞಾನ / ತಾಂತ್ರಿಕ ವೃತ್ತಿಪರ ವಿಷಯ ಕನಿಷ್ಠ ಅಂಕಗಳು ಸಾಮಾನ್ಯವಾಗಿ ಕಅಜ ನಲ್ಲಿ 50–60% ಅಂಕಗಳು ಪ್ರವೇಶ ಪರೀಕ್ಷೆಗಳು JEE Main COMED-K ರಾಜ್ಯ ಮಟ್ಟದ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳು ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆಗಳು ಉದ್ಯೋಗಾವಕಾಶಗಳು ಸೈಬರ್ ಸೆಕ್ಯುರಿಟಿ ಪದವೀಧರರು ಕೆಳಗಿನ ಕ್ಷೇತ್ರಗಳಲ್ಲಿ ಕೆಲಸ ಮಾಡಬಹುದು: ಐಟಿ ಕಂಪನಿಗಳು ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರ ರಕ್ಷಣಾ ಇಲಾಖೆ ಮತ್ತು ಸರ್ಕಾರಿ ಸಂಸ್ಥೆಗಳು ಸೈಬರ್ ಕ್ರೈಂ ತನಿಖಾ ಘಟಕಗಳು ಬಹುರಾಷ್ಟ್ರೀಯ ತಂತ್ರಜ್ಞಾನ ಕಂಪನಿಗಳು ಪ್ರಮುಖ ಉದ್ಯೋಗ ಹುದ್ದೆಗಳು ಸೈಬರ್ ಸೆಕ್ಯುರಿಟಿ ಅನಾಲಿಸ್ಟ್ ಎಥಿಕಲ್ ಹ್ಯಾಕರ್ / ಪೆನೆಟ್ರೇಶನ್ ಟೆಸ್ಟರ್ ನೆಟ್ವರ್ಕ್ ಸೆಕ್ಯುರಿಟಿ ಇಂಜಿನಿಯರ್ ಡಿಜಿಟಲ್ ಫರೆನ್ಸಿಕ್ ವಿಶ್ಲೇಷಕ SOC (Security Operations Center) ಅನಾಲಿಸ್ಟ್ ಭಾರತದ ಪ್ರಮುಖ ಕಾಲೇಜುಗಳು NIIT ಯುನಿವರ್ಸಿಟಿ ಜೈನ್ ಯುನಿವರ್ಸಿಟಿ, ಬೆಂಗಳೂರು ಅಮೃತ ವಿಶ್ವ ವಿದ್ಯಾಪೀಠಂ ಲವ್ಲಿ ಪ್ರೊಫೆಷನಲ್ ಯುನಿವರ್ಸಿಟಿ (LPU) ಸಿಂಬಯೋಸಿಸ್ ಸ್ಕಿಲ್ಸ್ & ಪ್ರೊಫೆಷನಲ್ ಯುನಿವರ್ಸಿಟಿ ಕ್ರೈಸ್ಟ್ ಯುನಿವರ್ಸಿಟಿ, ಬೆಂಗಳೂರು ಪ್ರೆಸಿಡೆನ್ಸಿ ಯುನಿವರ್ಸಿಟಿ, ಬೆಂಗಳೂರು ನಿರೀಕ್ಷಿತ ವೇತನ (Expected Salary) ಹಂತ ವಾರ್ಷಿಕ ವೇತನ ಫ್ರೆಶರ್ಸ್ 6 12 ಲಕ್ಷ ಅನುಭವ ಹೊಂದಿದವರು 12 18 ಲಕ್ಷ ಉನ್ನತ ಸಾಧಕರು 15 25 ಲಕ್ಷ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಅತಿಥಿ ಶಿಕ್ಷಕರಿಗೆ 10 ತಿಂಗಳ ಗೌರವಧನ ಬಿಡುಗಡೆಗೆ ಆಗ್ರಹಿಸಿ ಧರಣಿ


## ಎಐಡಿವೈಓ ನೇತೃತ್ವದಲ್ಲಿ ರಾಯಚೂರಿನಲ್ಲಿ ಪ್ರತಿಭಟನೆ ತಕ್ಷಣ ಕ್ರಮಕ್ಕೆ ಮನವಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (KKRDB) ಅಡಿಯಲ್ಲಿ ಅಕ್ಷರ ಆವಿಷ್ಕಾರ ಯೋಜನೆಯ ಮೂಲಕ ಸರ್ಕಾರಿ ಶಾಲೆಗಳಲ್ಲಿ ಪ್ರಾರಂಭವಾದ ಎಲ್‌ಕೆಜಿ, ಯುಕೆಜಿ (ECCE) ಹಾಗೂ ದ್ವಿಭಾಷಾ ತರಗತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಶಿಕ್ಷಕರು ಮತ್ತು ಆಯಾಗಳಿಗೆ ಕಳೆದ ಹತ್ತು ತಿಂಗಳಿನಿಂದ ಗೌರವಧನ ಸಂದಾಯವಾಗದೇ ಇರುವ ಹಿನ್ನೆಲೆಯಲ್ಲಿ,**

ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ 6 ನೇತೃತ್ವದಲ್ಲಿ ರಾಯಚೂರು ನಗರದ ಟಿಪ್ಪು ಸುಲ್ತಾನ್ ಗಾರ್ಡನ್‌ನಲ್ಲಿ ಪ್ರತಿಭಟನಾ ಧರಣಿ ನಡೆಸಿ ತಕ್ಷಣ ಗೌರವಧನ ಬಿಡುಗಡೆ ಮಾಡುವಂತೆ ಒತ್ತಾಯಿಸಲಾಯಿತು. ಗೌರವಧನ ಬಿಡುಗಡೆ ಆಗದೇ ಇರುವುದರಿಂದ ಅನೇಕ ಅತಿಥಿ ಶಿಕ್ಷಕರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಕುಟುಂಬ ನಿರ್ವಹಣೆಯೇ ಕಷ್ಟಕರವಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಅಕ್ಟೋಬರ್ ತಿಂಗಳಿನಿಂದಲೇ ಬಿಇಒ, ಡಿಡಿಪಿಐ, ಜಿಲ್ಲಾಧಿಕಾರಿಗಳು




ಹಾಗೂ ಕೆಕೆಆರ್‌ಡಿಬಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿದರೂ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆರೋಪಿಸಿದರು. ಶಾಸಕರ ಅನುದಾನದಿಂದ ಗೌರವಧನ ನೀಡುವ ವ್ಯವಸ್ಥೆ ಸಮಸ್ಯೆಗೆ ಕಾರಣವಾಗಿದ್ದು, ಕೆಕೆಆರ್‌ಡಿಬಿ ಅಥವಾ ಸರ್ಕಾರವೇ ನೇರವಾಗಿ ಗೌರವಧನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಲಾಯಿತು. ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳ ನಡುವೆ ಸಮನ್ವಯದ ಕೊರತೆಯಿಂದ ಅತಿಥಿ ಶಿಕ್ಷಕರು ಸಂಕಷ್ಟಕ್ಕೆ ಗುರಿಯಾಗಿದ್ದಾರೆ ಎಂದು ಪ್ರತಿಭಟನಾಕಾರರು ಹೇಳಿದರು. ಇದಲ್ಲದೆ, ಮುಖ್ಯಮಂತ್ರಿ ಅವರು 2025–26ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಅತಿಥಿ ಶಿಕ್ಷಕರ ಗೌರವಧನವನ್ನು 2000 ಹೆಚ್ಚಿಸುವುದಾಗಿ ಘೋಷಿಸಿದ್ದರೂ, ಕೆಕೆಆರ್‌ಡಿಬಿ ಮೂಲಕ ನೇಮಕವಾದ ಶಿಕ್ಷಕರಿಗೆ ಅದು ಅನ್ವಯವಾಗದಿರುವುದಕ್ಕೆ




ಸ್ಪಷ್ಟನೆ ಇಲ್ಲ ಎಂದು ಪ್ರಶ್ನಿಸಿದರು.

ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗೌರವಧನ ಬಿಡುಗಡೆ ಆಗಿರುವಾಗ ರಾಯಚೂರು ಜಿಲ್ಲೆಯಲ್ಲಿ ತಾರತಮ್ಯ ನಡೆಯುತ್ತಿದೆ ಎಂದು ಆರೋಪಿಸಿದರು. ಪ್ರಮುಖ ಬೇಡಿಕೆಗಳು ಹತ್ತು ತಿಂಗಳ ಬಾಕಿ ಗೌರವಧನ ತಕ್ಷಣ ಬಿಡುಗಡೆ ಮಾಡಬೇಕು. ಅತಿಥಿ ಶಿಕ್ಷಕರಿಗೆ ತಿಂಗಳಿಗೆ 12,000 ಹಾಗೂ ಆಯಾಗಳಿಗೆ 6,250 ನೀಡಬೇಕು. ಈಗಾಗಲೇ 10,000 ದಂತೆ ನೀಡಿರುವ ಶಿಕ್ಷಕರಿಗೆ ಉಳಿದ 2,000 ಬಿಡುಗಡೆ ಮಾಡಬೇಕು.= ಇಸಿಸಿಇ ಹಾಗೂ ದ್ವಿಭಾಷಾ ಅತಿಥಿ ಶಿಕ್ಷಕರಿಗೆ ಸರ್ಕಾರ ಅಥವಾ ಕೆಕೆಆರ್‌ಡಿಬಿಯಿಂದ ನೇರ ಪಾವತಿ ವ್ಯವಸ್ಥೆ ಜಾರಿಗೊಳಿಸಬೇಕು.

# ಧರ್ತಿ ಮಾತಾ ಬಚಾವೋ ಆಂದೋಲನ




ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಸಮೀಪದ ಬಿ.ಗಣೇಕಲ್ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಕೃಷಿ ಇಲಾಖೆ ವತಿಯಿಂದ ಧರ್ತಿ ಮಾತಾ ಬಚಾವೋ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**

ಧರ್ತಿ ಮಾತಾ ಬಚಾವೋ ಅಭಿಯಾನ (ಭೂಮಿ ತಾಯಿಯನ್ನು ಉಳಿಸಿ ಆಂದೋಲನ) ಎಂಬುದು ಭಾರತ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯವು ಮಣ್ಣಿನ ಆರೋಗ್ಯವನ್ನು ಕಾಪಾಡಲು ಮತ್ತು ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆಯನ್ನು ಕಡಿಮೆ ಮಾಡಲು ಹಮ್ಮಿಕೊಂಡಿರುವ ಒಂದು ಪ್ರಮುಖ ರಾಷ್ಟ್ರೀಯ ಜಾಗೃತಿ ಅಭಿಯಾನವಾಗಿದೆ. ಅರಕೇರಾ ತಾಲೂಕಿನ ಕೃಷಿ ಅಧಿಕಾರಿ ಮಾತನಾಡಿ, 'ಮಣ್ಣಿನ ಗುಣಧರ್ಮ ಹಾಗೂ ಫಲವತ್ತತೆ ಕಾಪಾಡುವುದು ಎಲ್ಲರ ಜವಾಬ್ದಾರಿ. ಅತಿಯಾದ ರಾಸಾಯನಿಕ ಗೊಬ್ಬರದ ಬಳಕೆಯಿಂದ ಭೂಮಿಯ ಮೇಲೆ ಮತ್ತು ಮಾನವನ ಆರೋಗ್ಯದ ಮೇಲೆ ತುಂಬಾ ದುಷ್ಪರಿಣಾಮ ಬೀರುವುದು' 'ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಣ್ಣಿಗೆ ರಾಸಾಯನಿಕ ಗೊಬ್ಬರ ಹಾಕುವುದರಿಂದ ಮಣ್ಣಿನಲ್ಲಿ ಇರುವ ಸೂಕ್ಷ್ಮಾಣು ಜೀವಿಗಳ ಸಂಖ್ಯೆ ಕಡಿಮೆಯಾಗಿ, ಮಣ್ಣಿನ ಫಲವತ್ತತೆ ಹಾಳಾಗುವುದು.

ರೈತರು ಸಾವಯವ ಗೊಬ್ಬರ, ತಿಪ್ಪೆ ಗೊಬ್ಬರ, ಹಸಿರೆಲೆ ಗೊಬ್ಬರ, ಎರೆಹುಳ ಗೊಬ್ಬರ ಬಳಸುವುದರಿಂದ ಬರಡಾಗುತ್ತಿರುವ ಭೂಮಿ ಚೈತನ್ಯಮಯವಾಗಿ ಮಣ್ಣಿನಲ್ಲಿ ಸಾವಯವ ಅಂಶ ಹೆಚ್ಚಾಗಿ, ಜೀವಿಗಳ ವೃದ್ಧಿ ಆಗುವುದು. ನೈಸರ್ಗಿಕ ಸಂಪನ್ಮೂಲಗಳಾದ ನೀರು, ಮಣ್ಣಿನಿಂದ ಸುತ್ತಮುತ್ತಲಿನ ವಾತಾವರಣವು ಸುಧಾರಣೆಯಾಗುತ್ತದೆ. ಮಣ್ಣಿನ ಸಂರಕ್ಷಣೆಗೆ ಯೂರಿಯಾ ಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೊ ಯೂರಿಯಾ ಮತ್ತು ನ್ಯಾನೋ ಡಿಎಪಿಯನ್ನು ಬಳಸಬೇಕು.

ರೈತರು ಪ್ರತಿ ವರ್ಷ ಮಣ್ಣು ಪರೀಕ್ಷೆ ಮಾಡಿಸಿ ಅದರ ಆಧಾರದ ಮೇಲೆಯೇ ರಸಗೊಬ್ಬರವನ್ನು ಹಾಕಿ ಭೂಮಿಯ ಸಂರಕ್ಷಣೆಗೆ ಮುಂದಾಗಬೇಕು' ಅದರ ಜೊತೆ ಎಲ್ಲಾ ರೈತರು ಕಡ್ಡಾಯವಾಗಿ ಈಖಆ ಮಾಡಿಸಿಕೊಳ್ಳಿ ಮುಂದಿನ ಕೃಷಿಗೆ ಸಂಬಂದಿಸಿದ ಯೋಜನೆ ಲಾಭ ಪಡಿಬೇಕು ಅಂದರೆ ಈಖಆ ರೈತರು ಹೊಂದಿರಬೇಕು ಎಂದು ರೈತರಿಗೆ ಮಾಹಿತಿ ನೀಡಿದರು. ಈ ಸಂಧರ್ಭದಲ್ಲಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮಲ್ಲಯ್ಯ ದಳವಾಯಿ ಮಾಜಿ ಅಧ್ಯಕ್ಷರು ಪ್ರಗತಿಪರ ರೈತರಾದ ಸಯ್ಯದಸಾಬು,ಶಿವರಾಜ ಬಾಬೆ, ಅರುಣ ಕುಮಾರ, ಅಮರೇಶ ಭೋವಿ, ವೆಂಕನಗೌಡ, ಮಲ್ಲೇಶ, ಅಂಜಿನೇಯ್ಯ, ಮುದುಕಪ್ಪ ಬಸವರಾಜ ಹಾಗೂ ಕೃಷಿ ಇಲಾಖೆ ಸಿಬ್ಬಂದಿ ಪಂಚಾಯತ ಸಿಬ್ಬಂದಿ ರೈತರು ಇನ್ನಿತರರು ಉಪಸ್ಥಿತರಿದ್ದರು.

# ಅಂತು ಇಂತು ಬಳಗಾನೂರಿಗೆ ಸರಕಾರಿ ಪಿ,ಯು,ಕಾಲೇಜು ಬಂತು!

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಮಸ್ಕಿ ವಿಧಾನಸಭಾ ಕ್ಷೇತ್ರದ ದೊಡ್ಡ ಪಟ್ಟಣ ಬಳಗಾನೂರು,ಇಷ್ಟು ವರ್ಷಗಳ ಕಾಲ ಶಿಕ್ಷಣ ಸೌಲಭ್ಯಕ್ಕಾಗಿ ಹೋರಾಡಿದ ಜನರ ಕನಸು, ಈಗ ನನಸಾಗಿದೆ.ಹೌದು,ಬಳಗಾನೂರಿಗೆ ಕೊನೆಗೂ ಸರಕಾರಿ PU ಕಾಲೇಜು ಮಂಜೂರಾಗಿದೆ.ಬಳಗಾನೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳ ವಿದ್ಯಾರ್ಥಿಗಳಿಗೆ ಇದುವರೆಗೂ ದೊಡ್ಡ ಸಮಸ್ಯೆ ಏನಿತ್ತು ಗೊತ್ತಾ?ಪಿಯುಸಿ ಓದಲು ದೂರದ ಪಟ್ಟಣಗಳಿಗೆ ಹೋಗಬೇಕಾಗುತ್ತಿತ್ತು.**

ಆರ್ಥಿಕ ಸಮಸ್ಯೆಗಳು,ಪ್ರಯಾಣದ ಕಷ್ಟ, ವಿಶೇಷವಾಗಿ ಹೆಣ್ಣುಮಕ್ಕಳಿಗೆ ಸುರಕ್ಷತೆ ಸಮಸ್ಯೆಗಳು ಇವೆಲ್ಲವೂ ಅನೇಕ ವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಮಧ್ಯದಲ್ಲೇ ನಿಲ್ಲಿಸುವಂತಾಗುತ್ತಿತ್ತು. ಇಷ್ಟು ದೊಡ್ಡ ಪಟ್ಟಣವಾಗಿದ್ದರೂ, ಸ್ವಾತಂತ್ರ್ಯನಂತರ ಒಂದು ಸರಕಾರಿ ಕಾಲೇಜು ಕೂಡ ಇಲ್ಲದಿರುವುದು ಜನರ ನಿರ್ಲಕ್ಷ್ಯವೋ,ಅಥವಾ ಜನಪ್ರತಿನಿಧಿಗಳ ವೈಫಲ್ಯವೋ ಎಂಬ ಪ್ರಶ್ನೆ ಎದ್ದಿತ್ತು.ಇದೇ ಊರಿನಿಂದ ಎರಡು ಬಾರಿ ಸಂಸದರನ್ನು ಆರಿಸಿ ಕಳುಹಿಸಲಾಗಿದೆ. ಅನೇಕ ಶಾಸಕರು ಆಯ್ಕೆಯಾಗಿದ್ದಾರೆ.




ಆದರೆ, ಒಂದು PU ಕಾಲೇಜು ಮಂಜೂರು ಮಾಡಲು 76 ವರ್ಷ ಬೇಕಾಯಿತೇ ಈ ಪ್ರಶ್ನೆ ಬಳಗಾನೂರಿನ ಜನರನ್ನು ಮಾತ್ರವಲ್ಲ, ಪೂರ್ಣ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಪ್ರಶ್ನಿಸುವಂತಾಗಿದೆ.

ಆದರೆ ಈ ಕಥೆ ಕೇವಲ ನಿರ್ಲಕ್ಷ್ಯದ ಕಥೆಯಲ್ಲ,ಇದು ಹೋರಾಟದ ಕಥೆಯೂ ಆಗಿದೆ.ಬಳಗಾನೂರು ನವನಿರ್ಮಾಣ ವೇದಿಕೆ,ಹಲವಾರು ಪ್ರಗತಿಪರ, ರೈತಪರ, ದಲಿತಪರ, ವಿದ್ಯಾರ್ಥಿಪರ ಸಂಘಟನೆಗಳ ಜೊತೆಗೂಡಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲರಿಗೆ ಮನವಿಪತ್ರ ನೀಡಲಾಗಿತ್ತು, ಜೊತೆಗೆ ನಿರಂತರ ಹೋರಾಟ ನಡೆಸಿತು. ಹಾಲಿ ಶಾಸಕ ಬಸನಗೌಡ ತುರುವಿಹಾಳರಿಗೂ ಮನವಿಪತ್ರ ನೀಡಲಾಗಿತ್ತು.ನಂತರ ಬಂದ್ ಘೋಷಣೆ, ಪ್ರತಿಭಟನೆಗಳು, ಅಧಿಕಾರಿಗಳಿಗೆ ಮನವಿ ಪತ್ರಗಳು ಪ್ರತಿ ಹಂತದಲ್ಲೂ ಒತ್ತಡನಿರ್ಮಿಸಲಾಯಿತು. ಈ ಹೋರಾಟದ ಫಲವಾಗಿ ಇಂದು ಕಾಲೇಜು ಮಂಜೂರಾಗಿದೆ ಎಂದು ವೇದಿಕೆಯ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ ಹೇಳಿದ್ದಾರೆ.

ಮಸ್ಕಿ ಕ್ಷೇತ್ರದ ಹಾಲಿ ಶಾಸಕ ಆರ್.ಬಸನಗೌಡ ತುರುವಿಹಾಳ ಅವರ ಪ್ರಯತ್ನ ಕೂಡ ಇಲ್ಲಿ ಪ್ರಮುಖವಾಗಿದೆ. ಅವರ ಮುಂದಾಳತ್ವದಲ್ಲಿ ಮತ್ತು ಶಿಕ್ಷಣ ಇಲಾಖೆಯ ಸಹಕಾರದಿಂದ ಈ ಶೈಕ್ಷಣಿಕ ವರ್ಷದಿಂದಲೇ PU ಪ್ರಥಮ ವರ್ಷದ ವಾಣಿಜ್ಯ ವಿಭಾಗ (ಗಣಕಯಂತ್ರ) ಆರಂಭವಾಗುತ್ತಿದೆ.ಪದವಿಪೂರ್ವ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರ ಹೊಕ್ರಾಣಿ ಈ ವಿಷಯವನ್ನು ಬಹುತೇಕ ಖಚಿತಪಡಿಸಿದ್ದಾರೆ.ಜೊತೆಗೆ ಸರಕಾರಿ ಪದವಿ ಕಾಲೇಜೂ ಮಂಜೂರಾಗಿದೆ ಎಂದು ಶಾಸಕರು ಹೇಳಿದ್ದಾರೆ.

ಆದರೆ ಪದವಿ ಕಾಲೇಜಿನ ಆರಂಭದ ಬಗ್ಗೆ ಇನ್ನೂ ಸ್ಪಷ್ಟತೆಯ ಅಗತ್ಯ ಇದೆ.ಆದರೆ ಪಿ,ಯು,ಕಾಲೇಜು ಪ್ರಸ್ತುತ ಸಾಲಿನಿಂದಲೇ ಆರಂಭವಾಗುವುದಂತೂ ಖಚಿತ. ಇದು ಕೇವಲ ಒಂದು ಆರಂಭ ಮಾತ್ರ. ಮುಂದಿನ ವರ್ಷಗಳಿಂದ ಕಲಾ ವಿಭಾಗ ಸೇರಿದಂತೆ ಇನ್ನಷ್ಟು ಕೋರ್ಸ್‌ಗಳು ಆರಂಭವಾಗುವ ನಿರೀಕ್ಷೆ ಇದೆ. ಇದರಿಂದ ಬಳಗಾನೂರು ಹಾಗೂ ಸುತ್ತಲಿನ ಹಳ್ಳಿಗಳ ವಿದ್ಯಾರ್ಥಿಗಳಿಗೆ ಶಿಕ್ಷಣದ ಹೊಸ ದಾರಿಗಳು ತೆರೆದಿವೆ. ಇನ್ನು ಮುಂದೆ ದೂರದ ಪಟ್ಟಣಗಳಿಗೆ ಹೋಗುವ ಅವಶ್ಯಕತೆ ಕಡಿಮೆಯಾಗುತ್ತದೆ.ಹೆಣ್ಣುಮಕ್ಕಳ ಶಿಕ್ಷಣಕ್ಕೆ ದೊಡ್ಡ ಉತ್ತೇಜನ ಸಿಗಲಿದೆ. ಒಂದು ಕಾಲೇಜು, ಅನೇಕ ಕುಟುಂಬಗಳ ಭವಿಷ್ಯವನ್ನು ಬದಲಾಯಿಸುವ ಶಕ್ತಿ ಹೊಂದಿದೆ.76 ವರ್ಷಗಳ ಕಾಯುವಿಕೆ ಒಂದು ಹೋರಾಟ,ಕೊನೆಗೂ ಒಂದು ಗೆಲುವು!ಬಳಗಾನೂರು ಇತಿಹಾಸದಲ್ಲಿ ಇದು ಒಂದು ಮಹತ್ವದ ಘಟ್ಟ. ಸ್ಟೋರಿ,ಸುರೇಶ ಬಳಗಾನೂರು.

# ಮುಧೋಳದ ಶ್ರೀ ಸಿದ್ಧ ಕ್ಷೇತ್ರ ಬ್ರಹ್ಮಗಡ್ಡಿ ಮಠ ಶ್ರೀ ಸಿದ್ದಲಿಂಗೇಶ್ವರ 45ನೇ ಮಹಾರಥೋತ್ಸವ

ನೈಜ್ಯ ದೆಸೆ ನ್ಯೂಸ್

**ಬಾಗಲಕೋಟ್: ಜಿಲ್ಲೆಯ ಮುಧೋಳ ತಾಲೂಕಿನಲ್ಲಿ ಶ್ರೀ ಸಿದ್ಧ ಕ್ಷೇತ್ರ ಬ್ರಹ್ಮಗಡ್ಡಿಮಠ ಮುಧೋಳ ಸೋಮವಾರ 27 ಏಪ್ರಿಲ್ 2026 ರಂದು ಶ್ರೀ ಸಿದ್ದಲಿಂಗೇಶ್ವರ 45ನೇ ಮಹಾರಥೋತ್ಸವ ಮುಧೋಳ ಶ್ರೀ ಸಿದ್ಧ ಕ್ಷೇತ್ರದ ಮೂಲ ಸ್ವರೂಪನೇ ಸಿದ್ದಮಾತೆ ಪೂಜ್ಯ ಮಂತ್ರಾಲಯ ಅಜ್ಜಿಯವರ ದಿವ್ಯ ಕೃಪಾ ಆಶೀರ್ವಾದದಿಂದ ಹಾಗೂ ಶ್ರೀಮತ ಪರಮ ಪೂಜ್ಯ ಮೌನಮುನಿ ಶಿವಶರಣಾನಂದ ಸಾಧು ಮಹಾರಾಜ್ ದಿವ್ಯ ಆದೇಶದ ಮೇರೆಗೆ ಹಾಗೂ ಶ್ರೀ ಪೂಜ್ಯ ಪರಮೇಶ್ವರ ಸಾಧು ಮಹಾರಾಜ್**

ಶ್ರೀ ಸಿದ್ದಕ್ಷೇತ್ರ ಬ್ರಹ್ಮಗಡ್ಡಿ ಮಠ ಮುಧೋಳಿ ಇವರ ನೇತೃತ್ವದಲ್ಲಿ ಉತ್ಸವ ಕಾರ್ಯಕ್ರಮಗಳು.

ಜರಗುವೂದು ಬುಧವಾರ ದಿನಾಂಕ 27 ಏಪ್ರಿಲ್ 2026 ರಿಂದ ಮಂಗಳವಾರ ದಿನಾಂಕ 28 ಏಪ್ರಿಲ್ 2026 ವರೆಗೆ ಬೆಳಿಗ್ಗೆ ಆರು 15ಕ್ಕೆ ಶ್ರೀ ಕ್ಷೇತ್ರದ ಸಕಲ ದೇವತೆಗಳ ಅಭಿಷೇಕ ಮಹಾಪೂಜೆ ಬುಧವಾರ ದಿನಾಂಕ 22–4 –2026 ರಿಂದ ಮಂಗಳವಾರ ದಿನಾಂಕ 28– 4 –2026 ರ ವರೆಗೆ ಪ್ರತಿನಿತ್ಯ ರಾತ್ರಿ 7.30 ರಿಂದ 9:15 ರವರೆಗೆ ಪರಮಪೂಜ್ಯಶ್ರೀ ನಿತ್ಯಾನಂದ ಸ್ವಾಮಿಗಳು ಶಿವಾನಂದ ಭಾರತಿ ಪ್ರಶಾಂತ್ ಆಶ್ರಮ ಕಲ್ಲೋಳಿ ಇವರಿಂದ ಪ್ರವಚನ ಕಾರ್ಯಕ್ರಮ ಸಂಗೀತ ಸೇವೆ ಗುರು ಶಾಂತಪ್ಪ ಕುಂಬಾರ ಗವಾಯಿಗಳು ತಬಲಾಜಿ



ಶ್ರೀ ಮಲಕಪ್ಪ ಶೆಟ್ಟಿ 26.4.2026 ರಿಂದ ಬೆಳಗ್ಗೆ 6 15ಕ್ಕೆ ಶ್ರೀ ಸಿದ್ಧಲಿಂಗ ಋಷಿಗಳ ರುದ್ರಾಕ್ಷಿ ಪೂಜೆ ನಂತರ ಶ್ರೀ ಸಿದ್ದಮಾತೆ ಪೂಜ್ಯ ಮಂತ್ರಾಲಯ ಅಜ್ಜಿಯವರ ಹಾಗೂ ಶ್ರೀಮತ ಪರಮಪೂಜ್ಯ ಮೌನ ಮುನಿ ಶಿವಶರಣಾನಂದ ಸಾಧು ಮಹಾರಾಜ ವೈಭವದ ತೂಗು ಉಯ್ಯಾಲೆ ಕಾರ್ಯಕ್ರಮ ಸೋಮವಾರ ದಿನಾಂಕ 27 ಏಪ್ರಿಲ್ 2026 ರಂದು ಬೆಳಿಗ್ಗೆ 7:15ಕ್ಕೆ ಶ್ರೀ ಸಿದ್ದಲಿಂಗ ಋಷಿಗಳ ರುದ್ರಾಭಿಷೇಕ ಪೂಜೆ ಮುಂಜಾನೆಯ ಹತ್ತು ಹದಿನೈದಕ್ಕೆ ರಥಕ್ಕೆ ಕಳಸಾರೊಹಣ ಮಧ್ಯಾಹ್ನ 12:30ಕ್ಕೆ ಮಹಾಪ್ರಸಾದ ಮಧ್ಯಾಹ್ನ ಕುಂಭ ಕಳಸ ಪೂರ್ವದ ಡೊಳ್ಳಿನ ಮೇಳ ಜಾಂಜ್ ಪತಕ ಹಾಗೂ ಅನೇಕ ವಾದ್ಯ ವೈಭವಗಳೊಂದಿಗೆ ಶ್ರೀ ಸಿದ್ದಲಿಂಗ ಋಷಿಗಳ ಅಡ್ಡ ಪಲ್ಲಕ್ಕಿಯ ಭವ್ಯ ಮೆರವಣಿಗೆಯುವ ಪುರ ಪ್ರವೇಶ ವಾಗುವುದು

ಸಾಯಂಕಾಲ ಆರು 25ಕ್ಕೆ ಶ್ರೀ ಸಿದ್ದಲಿಂಗೇಶ್ವರ ಮಹಾರಾತ್ಯೋತ್ಸವ ಮಂಗಳವಾರ ದಿನಾಂಕ 28 ಏಪ್ರಿಲ್ 2026 ರಂದು ಬೆಳಿಗ್ಗೆ 7 15ಕ್ಕೆ ಶ್ರೀ ಸಿದ್ದಲಿಂಗ ಋಷಿಗಳ ವಿಭೂತಿ ಮಹಾಪೂಜೆ. ರಾತ್ರಿ 7:15 ರಿಂದ 8 15 ರವರೆಗೆ ಸಂಗೀತ ಭಜನೆ ಯೊಂದಿಗೆ ಪ್ರತಿ ಪುಷ್ಪಗಳಿಂದ ಕೈಲಾಸ ಮಂಟಪದಲ್ಲಿ ಶ್ರೀ ಸಿದ್ದಲಿಂಗ ಋಷಿಗಳ ಕೌದಿ ಮಹಾಪೂಜೆ ನಂತರ ಶ್ರೀ ಸಿದ್ದಲಿಂಗ ಋಷಿಗಳ ಜಯ ಜಯ ಕಾರರೊಂದಿಗೆ ಕಾರ್ಯಕ್ರಮ ಮಹಾಮಂಗಳಗೊಳ್ಳೋದು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.